ಕರ್ನಾಟಕ ವಿಧಾನ ಪರಿಷತ್ತು

# ನೂರ ಐವತ್ತ ನಾಲ್ಕನೆಯ ಅಧಿವೇಶನದ

# ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ದಿನಾಂಕ: 09.12.2024 ರಿಂದ 19.12.2024ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ವಿಧಾನ ಸೌಧ, ಬೆಂಗಳೂರು-560 001

# ನೂರ ಐವತ್ತ ನಾಲ್ಕನೆಯ ಅಧಿವೇಶನದ

# ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

## (ದಿನಾಂಕ: 09.12.2024 ರಿಂದ 19.12.2024ರವರೆಗೆ)

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

**ವಿಧಾನ ಸೌಧ, ಬೆಂಗಳೂರು-560 001**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಸೋಮವಾರ, ದಿನಾಂಕ:09.12.2024

**(01)**

ದಿನಾಂಕ:09.12.2024ರಂದು ಬೆಳಗ್ಗೆ 11.00 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**'ವಂದೇ ಮಾತರಂ'** ಗೀತೆಯೊಂದಿಗೆ ಗೌರವ ಸೂಚಿಸುವ ಮೂಲಕ ಸದನದ ಕಾರ್ಯಕಲಾಪಗಳು ವಿಧ್ಯುಕ್ತವಾಗಿ ಆರಂಭಗೊಂಡಿತು.

## ಭಾರತದ ಸಂವಿಧಾನ

### ಪೀಠಿಕೆ

ಮಾನ್ಯ ಸಭಾಪತಿಯವರು ಎಲ್ಲಾ ಶಾಸಕರಿಗೂ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು.

## 1. ಸಂತಾಪ ಸೂಚನೆಗಳು

ಕಳೆದ ಅಧಿವೇಶನದ ನಂತರ ನಿಧನ ಹೊಂದಿದ ಈ ಕೆಳಕಂಡ ಗಣ್ಯರುಗಳಿಗೆ ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು.

**ಶ್ರೀಮತಿ/ಶ್ರೀಯುತರುಗಳಾದ:**

01. ಕೆ.ಎಚ್. ಶ್ರೀನಿವಾಸ್, ಮಾಜಿ ಸಚಿವರು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರು

02. ಶುಭಲತಾ ವಸಂತ್ ಅಸ್ನೋಟಿಕರ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರು

03. ಕಾಲೇಬುಡ್ಡೆ ಇಸ್ಮಾಯಿಲ್ ಸಾಬ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರು

04. ನರೇಂದ್ರ ಖೇಣಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು

05. ಕೆ. ನಿರಂಜನ ನಾಯ್ಡು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು

06. ಸಾವಿತ್ರಮ್ಮ ಎಂ. ಗುಂಡಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು

07. ಮನೋಹರ್ ತಹಸೀಲ್ದಾರ್, ಮಾಜಿ ಸಚಿವರು, ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರು

08. ರತನ್ ನಾವಲ್ ಟಾಟಾ, ಭಾರತೀಯ ಕೈಗಾರಿಕೋದ್ಯಮಿ

09. ಡಾ: ಸ್ಯೆಯದ್ ಶಹಾ ಖುಸ್ರೊ ಹುಸೇನಿ, ಖಾಜಾ ಬಂದಾ ನವಾಜ್ ವಿಶ್ವವಿದ್ಯಾಲಯದ ವಿದ್ವಾಂಸರು, ಶಿಕ್ಷಣ ತಜ್ಞರು

10. ರಾಜಶೇಖರ ನೀರಮಾನ್ವಿ, ಖ್ಯಾತ ಸಾಹಿತಿಗಳು

ಮಾನ್ಯ ಸಭಾನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತಿಯನ್ನು ವ್ಯಕ್ತಪಡಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಅವರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 2. ಪ್ರಶ್ನೋತ್ತರ

ದಿನಾಂಕ:09.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 1ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 1 (50) | |
| 2. | 2(66) | ಅರ್ಧ ಗಂಟೆ ಕಾಲಾವಧಿ ಚರ್ಚೆ |
| 3. | 3(125) | |
| 4. | 4(118) | |
| 5. | 5(39) | |
| 6. | 6(04) | |
| 7. | 7(74) | |
| 8. | 8(25) | ತಡೆಹಿಡಿಯಲಾಯಿತು |
| 9. | 9(63) | |
| 10. | 10(92) | ಶ್ರೀ ಕೇಶವ ಪ್ರಸಾದ್ ಎಸ್ ಅವರ ಪರವಾಗಿ ಶ್ರೀ ಎಸ್.ವ್ಹಿ. ಸಂಕನೂರ |
| 11. | 11(13+16+28+73+131) | |
| 12. | 12(57) | |
| 13. | 13(123) | |
| 14. | 14(115) | |
| 15. | 15(80) | ಶ್ರೀ ಗೋವಿಂದರಾಜು ಅವರ ಪರವಾಗಿ ಶ್ರೀ ಕೆ.ಎ. ತಿಪ್ಪೇಸ್ವಾಮಿ |

ದಿನಾಂಕ:09.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 1ನೇ ಪಟ್ಟಿಯ ಒಟ್ಟು 113 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

## 3. ಶೂನ್ಯ ವೇಳೆ

1. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಮೊಟ್ಟೆ ಭಾಗ್ಯ ಯೋಜನೆಯಿಂದ ಶಿಕ್ಷಕರಿಗೆ ಆರ್ಥಿಕ ಸಮಸ್ಯೆ ಉಂಟಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಎಂ. ನಾಗರಾಜು** ಅವರು ಶಾಸಕರ ನಿಧಿ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲದ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀಯುತರುಗಳಾದ ಸಿ.ಟಿ. ರವಿ, ಡಿ.ಎಸ್. ಅರುಣ್ ಹಾಗೂ ಎನ್. ರವಿಕುಮಾರ್** ಅವರುಗಳು ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಮತ್ತು ನವಜಾತ ಶಿಶುಗಳ ಮರಣ ಪ್ರಮಾಣ ದಿನೇ ದಿನೇ ಹೆಚ್ಚುತ್ತಿರುವ ಕುರಿತು ತನಿಖೆ ನಡೆಸುವ ಬಗ್ಗೆ ಪ್ರಸ್ತಾಪಿಸಿದರು.

ನಿಯಮ 330ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

5. **ಡಾ:ತಳವಾರ ಸಾಬಣ್ಣ** ಅವರು ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಕೆ.ಎಸ್. ನವೀನ್** ಅವರು ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಮಂಜುನಾಥ್ ಭಂಡಾರಿ** ಅವರು ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

8. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಬಳ್ಳಾರಿ ನಗರದಲ್ಲಿ ನಿರ್ಮಿಸಿರುವ ಸಾಂಸ್ಕೃತಿಕ ಸಮುಚ್ಚಯಕ್ಕೆ ದಿ॥ ಎಂ.ಪಿ. ಪ್ರಕಾಶ್‌ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಪಿ.ಹೆಚ್. ಪೂಜಾರ್** ಅವರು ಮಾಜಿ ಸೈನಿಕರುಗಳ ಹಲವು ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಶೇ.50ರಷ್ಟು ಕಂದಾಯ ರಿಯಾಯಿತಿ ನೀಡುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಐವನ್ ಡಿ'ಸೋಜಾ** ಅವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ 200

ನೌಕರರಿಗೆ ನಾಲ್ಕು ವರ್ಷಗಳಿಂದ ನಿವೃತ್ತಿ ವೇತನ ಮತ್ತು ಉಪದಾನ ನೀಡದಿರುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

### 4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಮಾನ್ಯ ಸಭಾನಾಯಕರು ಹಾಗೂ ಸಂಬಂಧಪಟ್ಟ ಮಾನ್ಯ ಸಚಿವರುಗಳು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ ಮತ್ತು ಎರಡನೇ ಪಟ್ಟಿಯನ್ನು ಸದನದಲ್ಲಿ ಮಂಡಿಸಿದರು.

### 5. ನಿಲುವಳಿ ಸೂಚನೆ

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಮತ್ತು ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಡಿ.ಎಸ್. ಅರುಣ್, ಶ್ರೀ ಬಿ.ಜಿ. ಪಾಟೀಲ್, ಶ್ರೀ ಎನ್. ರವಿಕುಮಾರ್ ಹಾಗೂ ಇತರರು ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದದಿಂದ ರೈತರು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು ನಿಯಮ 59ರ ಅಡಿ ಪ್ರಸ್ತಾಪಿಸಿದರು.

ನಿಲುವಳಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚಿಸಲು ಅನುಮತಿ ನೀಡಲಾಗಿದೆ ಎಂದು ಮಾನ್ಯ ಸಭಾಪತಿಯವರು ತಿಳಿಸಿದರು.

### 6. ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1 | ಕರ್ನಾಟಕ ಧನವಿನಿಯೋಗ (ಸಂಖ್ಯೆ–4) ವಿಧೇಯಕ, 2024 (ವಿ.ಸಂ.33)<br>The Karnataka Appropriation (No.4) Bill, 2024(Bill No.33) | 06.08.2024 | ರಾಜ್ಯಪಾಲರು |
| 2 | ಕರ್ನಾಟಕ ವೈದ್ಯಕೀಯ ನೋಂದಣಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2024 (ವಿ.ಸಂ.37)<br>The Karnataka Medical Registration and Certain other Law (Amendment) Bill, 2024(Bill No.37) | 15.08.2024 | ರಾಜ್ಯಪಾಲರು |
| 3 | ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.32)<br>The Karnataka Irrigation (Amendment) Bill, 2024(Bill No.32) | 15.08.2024 | ರಾಜ್ಯಪಾಲರು |
| 4 | ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 2024 (ವಿ.ಸಂ.39) | 15.08.2024 | ರಾಜ್ಯಪಾಲರು |

| | | | |
|---|---|---|---|
| | The Karnataka Scheduled Castes, Scheduled Tribes and Other Backward Classes (Reservation of Appointments Etc.,) (Amendment) Bill, 2024 (Bill No.39) | | |
| 5 | ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2024 (ವಿ.ಸಂ.40)<br><br>The Karnataka Government Parks (Preservation (Amendment) Bill, 2024(Bill No.40) | 15.08.2024 | ರಾಜ್ಯಪಾಲರು |
| 6 | ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.35)<br><br>The Karnataka Land Revenue (Second Amendment) (Bill No.35) | 15.08.2024 | ರಾಜ್ಯಪಾಲರು |
| 7 | ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.36) | 08.08.2024 | ರಾಜ್ಯಪಾಲರು |

| | | | |
|---|---|---|---|
| | The Karnataka Ancient and Historical Monuments and Archeological Sites and Remains (Amendment) Bill, 2024(Bill No.36) | | |
| 8 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2023 (ಬಿಲ್ ಸಂಖ್ಯೆ–24)<br><br>The Bruhat Bengaluru Mahanagara Palike and Certain Other Law (Amendment) Bill, 2023(Bill No.24) | 15.08.2024 | ರಾಜ್ಯಪಾಲರು |
| 9 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.29)<br><br>The Karnataka Goods and Services Tax (Amendment) Bill, 2024 (Bill No.29) | 07.08.2024 | ರಾಜ್ಯಪಾಲರು |
| 10 | ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ವಿಧೇಯಕ, 2023 (ಬಿಲ್ ಸಂಖ್ಯೆ–21) | 06.09.2024 | ರಾಜ್ಯಪಾಲರು |

| | | | |
|---|---|---|---|
| | The Karnataka Public Examination (Measures for Prevention of Corruption and Unfair Means in Recruitment) Bill, 2023 (LA Bill No. 21) (Bill No.21) | | |
| 11 | ಶ್ರೀ ರೇಣುಕಾಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 (ವಿ.ಸಂ.38)<br>Sri Renuka Yellamma Temple Development Authority Bill, 2024 (Bill No.38) | 06.09.2024 | ರಾಜ್ಯಪಾಲರು |
| 12 | ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2024 (ವಿ.ಸಂ.31)<br>The Karnataka Municipalities and Certain other Law (Amendment) Bill, 2024(Bill No.31) | 18.02.2024 | ರಾಜ್ಯಪಾಲರು |
| 13 | ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, 2024 (ವಿ.ಸಂ.28) | 23.09.2024 | ರಾಜ್ಯಪಾಲರು |

| | | | |
|---|---|---|---|
| | The Karnataka Cine and Cultural Activists (Welfare) Bill, 2024 (Bill No.28) | | |
| 14 | ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ,2023<br>(2023ರ ವಿಧಾನ ಸಭೆಯ ವಿಧೇಯಕ ಸಂಖ್ಯೆ–11)<br>The Registration (Karnataka Amendment) Bill, 2023(2023 LA Bill No.11) | 08.10.2024 | ರಾಷ್ಟ್ರಪತಿಯವರು |

ಮಧ್ಯಾಹ್ನ 2.10 ಗಂಟೆಯಲ್ಲಿ ಸದನವನ್ನು ಮುಂದೂಡಿ ಮಧ್ಯಾಹ್ನ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ**(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 7. ನೂತನ ಶಾಸಕರ ಪರಿಚಯ

ಮಾನ್ಯ ವಿರೋಧ ಪಕ್ಷದ ನಾಯಕರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನೂತನವಾಗಿ ಚುನಾಯಿತರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ ಅವರನ್ನು ಸದನಕ್ಕೆ ಪರಿಚಯಿಸಿದರು.

## 8. ಪ್ರಕಟಣೆ

ಮಾನ್ಯ ಸಭಾಪತಿಯವರು ಈ ಕೆಳಕಂಡ ಪ್ರಕಟಣೆಯನ್ನು ಪ್ರಕಟಿಸಿದರು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಮಾನ್ಯ ಶಾಸಕರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

**ಶ್ರೀಮತಿ/ಶ್ರೀಯುತರುಗಳಾದ:**

1. ಶಶೀಲ್ ಜಿ. ನಮೋಶಿ
2. ಭಾರತಿ ಶೆಟ್ಟಿ
3. ಕೆ.ಎ. ತಿಪ್ಪೇಸ್ವಾಮಿ
4. ಮಂಜುನಾಥ್ ಭಂಡಾರಿ

**9. ಗಮನ ಸೆಳೆಯುವ ಸೂಚನೆ**

1. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಕಲಬುರ್ಗಿ ಜಿಲ್ಲೆಯಲ್ಲಿ 30 ಲಕ್ಷ ರೈತರು ಬೆಳೆಯುತ್ತಿರುವ ತೊಗರಿ ಜಿ1–ಟ್ಯಾಗ್ ಕ್ಲಾಸ್–31 ಪ್ರಮಾಣಪತ್ರ 2017ರಿಂದ 2019ರಲ್ಲಿ ದೊರೆತಿದ್ದರೂ ಅದರ ಗುಣಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕ ಬೆಂಬಲ ಬೆಲೆ ಘೋಷಿಸದಿರುವುದರಿಂದ ರೈತರಿಗೆ ನಷ್ಟವುಂಟಾಗುತ್ತಿರುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆದರು.

   ಮಾನ್ಯ ಕೃಷಿ ಸಚಿವರು ಉತ್ತರಿಸಿದರು.

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ**

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಮತ್ತು ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಡಿ.ಎಸ್. ಅರುಣ್, ಶ್ರೀ ಬಿ.ಜಿ. ಪಾಟೀಲ್, ಶ್ರೀ ಎನ್. ರವಿಕುಮಾರ್ ಹಾಗೂ ಇತರರು ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದದಿಂದ ರೈತರು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು ಚರ್ಚೆಯನ್ನು ಪ್ರಾರಂಭಿಸಿದರು.

ಮಧ್ಯಾಹ್ನ 4.05 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು.

ಸಂಜೆ 5.20 ಗಂಟೆಯಲ್ಲಿ ಮಾನ್ಯ ಸಭಾಪತಿಯವರು**(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

ಸಂಜೆ 5.47 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸಂಜೆ 6.10 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಸಂಜೆ 6.15 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

ಸಂಜೆ 6.30 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:10.12.2024ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಂಗಳವಾರ, ದಿನಾಂಕ:10.12.2024

**(02)**

ದಿನಾಂಕ:10.12.2024ರಂದು ಬೆಳಗ್ಗೆ 11.36 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಸಂತಾಪ ಸೂಚನೆ

**ಪದ್ಮವಿಭೂಷಣ ಪುರಸ್ಕೃತ ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು** ದಿನಾಂಕ:10.12.2024ರಂದು ನಿಧನ ಹೊಂದಿದ್ದು, ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದರು.

ಮಾನ್ಯ ಸಭಾನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತಿಯನ್ನು ವ್ಯಕ್ತಪಡಿಸಿ ಮಾತನಾಡಿದರು.

ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ ಈ ಕೆಳಕಂಡ ಮಾನ್ಯ ಶಾಸಕರುಗಳು ಸಂತಾಪ ಸೂಚನಾ ನಿರ್ಣಯ ಕುರಿತು ಮಾತನಾಡಿದರು.

ಶ್ರೀಯುತರುಗಳಾದ:

1. ಡಾ: ಡಿ. ತಿಮ್ಮಯ್ಯ
2. ಎಸ್.ಎಲ್. ಭೋಜೇಗೌಡ

3. ಶಶೀಲ್ ಜಿ. ನಮೋಶಿ

4. ಬಿ.ಕೆ. ಹರಿಪ್ರಸಾದ್

5. ಸಿ.ಟಿ. ರವಿ

6. ಅಡಗೂರ್ ಹೆಚ್. ವಿಶ್ವನಾಥ್

7. ಎಂ. ನಾಗರಾಜು

8. ತಿಪ್ಪಣ್ಣಪ್ಪ ಕಮಕನೂರ

9. ಶರವಣ ಟಿ.ಎ

10. ಪಿ.ಹೆಚ್. ಪೂಜಾರ್

11. ಎನ್. ರವಿಕುಮಾರ್

12. ಮಂಜುನಾಥ್ ಭಂಡಾರಿ

13. ಉಮಾಶ್ರೀ

14. ಕೆ.ಎಸ್. ನವೀನ್

15. ಮಧು ಜಿ. ಮಾದೇಗೌಡ

16. ನಸೀರ್ ಅಹ್ಮದ್

17. ಹೆಚ್.ಪಿ. ಸುಧಾಮ್ ದಾಸ್

18. ಐವನ್ ಡಿ'ಸೋಜಾ

19. ಡಾ: ಕೆ. ಗೋವಿಂದರಾಜ್

20. ಕೇಶವ ಪ್ರಸಾದ್ ಎಸ್

ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಅವರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ

ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವನ್ನು ಮಧ್ಯಾಹ್ನ 1.45 ಗಂಟೆಯಲ್ಲಿ ಮುಂದೂಡಿ ದಿನಾಂಕ:12.12.2024ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಗುರುವಾರ, ದಿನಾಂಕ:12.12.2024

**(03)**

ದಿನಾಂಕ:12.12.2024 ರಂದು ಬೆಳಗ್ಗೆ 11.15 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:12.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 4ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 54(494) | |
| 2. | 48(403) | |
| 3. | 46(464) | |
| 4. | 52(407) | ಕಾಲಾವಕಾಶ |
| 5. | 53(458) | ಗೈರು ಹಾಜರಿ |
| 6. | 55(535) | |
| 7. | 56(457) | |
| 8. | 58(462) | |
| 9. | 59(428) | |
| 10. | 60(884) | |

ದಿನಾಂಕ:12.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 4ನೇ ಪಟ್ಟಿಯ ಒಟ್ಟು 142 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

## 2. ಪ್ರಕಟಣೆಗಳು

**ಮಾನ್ಯ ಸಭಾಪತಿಯವರು ಈ ಕೆಳಕಂಡ ಪ್ರಕಟಣೆಗಳನ್ನು ಪ್ರಕಟಿಸಿದರು:**

**1.** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222ರ ರೀತ್ಯಾ ವಿಧಾನ ಪರಿಷತ್ತಿನ 154ನೇ ಅಧಿವೇಶನದಲ್ಲಿ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿರುತ್ತದೆಂದು ಪ್ರಕಟಿಸಿದರು.

| ಕ್ರಮ ಸಂ | ಹೆಸರುಗಳು<br>ಶ್ರೀಮತಿ/ಶ್ರೀಯುತರುಗಳಾದ: | ಸ್ಥಾನ |
|---|---|---|
| 01. | **ಪ್ರಾಣೇಶ್ ಎಂ.ಕೆ.**<br>ಮಾನ್ಯ ಉಪ ಸಭಾಪತಿಯವರು | ಸದಸ್ಯರು |
| 02. | **ಎನ್.ಎಸ್. ಬೋಸ್‌ರಾಜು**<br>ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು | ಸದಸ್ಯರು |
| 03. | **ಛಲವಾದಿ ಟಿ. ನಾರಾಯಣಸ್ವಾಮಿ**<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು | ಸದಸ್ಯರು |
| 04. | **ಸಲೀಂ ಅಹಮದ್**<br>ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು | ಸದಸ್ಯರು |
| 05. | **ಸುನೀಲ್ ವಲ್ಯಾಪುರೆ**<br>ವಿಧಾನ ಪರಿಷತ್ತಿನ ವಿರೋಧ ಪಕ್ಷದ ಉಪ ನಾಯಕರು | ಸದಸ್ಯರು |

| | | |
|---|---|---|
| 06. | **ಎಸ್.ಎಲ್. ಭೋಜೇಗೌಡ**<br>ವಿಧಾನ ಪರಿಷತ್ತಿನ ಜನತಾದಳ (ಜಾ) ಶಾಸಕಾಂಗ ಪಕ್ಷದ ನಾಯಕರು | ಸದಸ್ಯರು |
| 07. | **ಬಿ.ಕೆ. ಹರಿಪ್ರಸಾದ್**<br>ವಿಧಾನ ಪರಿಷತ್ತಿನ ಮಾನ್ಯ ಶಾಸಕರು | ಸದಸ್ಯರು |
| 08. | **ಐವನ್ ಡಿ.ಸೋಜಾ**<br>ವಿಧಾನ ಪರಿಷತ್ತಿನ ಮಾನ್ಯ ಶಾಸಕರು | ಸದಸ್ಯರು |

**ವಿಶೇಷ ಆಹ್ವಾನಿತರು**

| | | |
|---|---|---|
| 01. | ಶ್ರೀ ಸಿದ್ದರಾಮಯ್ಯ | ಮಾನ್ಯ ಮುಖ್ಯಮಂತ್ರಿಗಳು |
| 02 | ಶ್ರೀ ಡಿ.ಕೆ. ಶಿವಕುಮಾರ್ | ಮಾನ್ಯ ಉಪ ಮುಖ್ಯಮಂತ್ರಿಗಳು |
| 03 | ಶ್ರೀ ಹೆಚ್.ಕೆ. ಪಾಟೀಲ್ | ಮಾನ್ಯ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು |

**ಮಾನ್ಯ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.**

**2.** ದಿನಾಂಕ:23.01.2025 ರಿಂದ ದಿನಾಂಕ:25.01.2025ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂತರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳ–2025ನ್ನು ಆಯೋಜಿಸಲಾಗಿದ್ದು, ಇದಕ್ಕೆ ಪೂರ್ವಭಾವಿ ಕಾರ್ಯಕ್ರಮವನ್ನು (ಕರ್ಟನ್ ರೈಸರ್) ದಿನಾಂಕ:13.12.2024ರಂದು ಮಧ್ಯಾಹ್ನ 01.30ಕ್ಕೆ ಸುವರ್ಣ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಿಲೆಟ್ ಭೋಜನದೊಂದಿಗೆ ಆಯೋಜಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದಲ್ಲಿ ತಾವುಗಳೆಲ್ಲರೂ ಭಾಗವಹಿಸಬೇಕೆಂದು ಕೋರಿದೆ.

**3. ವರದಿಗಳನ್ನೊಪ್ಪಿಸುವುದು**

ಅ. **ಶ್ರೀ ರಾಜೇಂದ್ರ ರಾಜಣ್ಣ (ಸದಸ್ಯರು, ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ)** ಅವರು 2024–25ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸಿದರು.

ಆ. **ಶ್ರೀಮತಿ ಉಮಾಶ್ರೀ (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ)** ಅವರು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 137ನೇ ಹಾಗೂ 138ನೇ ವರದಿಯನ್ನು ಒಪ್ಪಿಸಿದರು.

ಇ. **ಶ್ರೀ ಶರಣಗೌಡ ಬಯ್ಯಾಪುರ (ಸದಸ್ಯರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)**ಅವರು ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 38ನೇ ವರದಿಯನ್ನು ಒಪ್ಪಿಸಿದರು.

**4. ಚುನಾವಣಾ ಪ್ರಸ್ತಾವಗಳು**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಮಾನ್ಯ ಶಾಸಕರನ್ನು ಚುನಾಯಿಸಬೇಕೆಂಬ ಪ್ರಸ್ತಾವವನ್ನು ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪ್ರಸ್ತಾವ ಮಂಡಿಸಿದರು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

**5. ಶೂನ್ಯ ವೇಳೆ ಪ್ರಸ್ತಾವಗಳು**

1. **ಶ್ರೀ ಮಂಜುನಾಥ್ ಭಂಡಾರಿ** ಅವರು ನಂದಿಕೂರು–ಕಾಸರಗೋಡು ವಿದ್ಯುತ್ ಲೈನ್‌ಗೆ ಪರ್ಯಾಯ ಯೋಜನೆ ರೂಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಇಂಧನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾ ನಾಯಕರು ತಿಳಿಸಿದರು.

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳು ಹಾಗೂ ಬಿಡಾಡಿ ದನಗಳು, ಮಕ್ಕಳು ಹಾಗೂ ನಾಗರೀಕರ ಮೇಲೆ ದಾಳಿ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾ ನಾಯಕರು ತಿಳಿಸಿದರು.

3. **ಶ್ರೀ ಎಂ. ನಾಗರಾಜು** ಅವರು ಮಳೆಗಾಲದಲ್ಲಿ ಪದೇ ಪದೇ ಪ್ರವಾಹಕ್ಕೊಳಗಾಗುವ ಗ್ರಾಮಗಳ ಸಂತ್ರಸ್ತರಿಗೆ ಪುನರ್ವಸತಿ ಕಾರ್ಯಕ್ರಮದ ಮೂಲಕ ಸಂತ್ರಸ್ತರಿಗೆ ಶಾಶ್ವತ ಪರಿಹಾರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಡಾ: ತಳವಾರ್ ಸಾಬಣ್ಣ** ಅವರು 2006ರ ಪೂರ್ವ ನೇಮಕವಾಗಿ ತದನಂತರ ಅನುದಾನಕ್ಕೊಳಪಟ್ಟು, ಹಳೆ ಪಿಂಚಣಿ ಸೌಲಭ್ಯದಿಂದ ವಂಚಿತರಾದ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಪಿಂಚಣಿ ಸಮಸ್ಯೆಯ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಡಾ: ಧನಂಜಯ ಸರ್ಜಿ** ಅವರು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ–2ಎ ಮೀಸಲಾತಿ ನೀಡುವ ಹಾಗೂ ಹೋರಾಟವನ್ನು ಹತ್ತಿಕ್ಕುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಗೃಹ ಸಚಿವರು ಉತ್ತರಿಸಿದರು.

**"ಗದ್ದಲ"**

ಮಧ್ಯಾಹ್ನ 1.55 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ನಾಳೆ ಚರ್ಚೆಗೆ ಅವಕಾಶ ನೀಡುವುದಾಗಿ ತಿಳಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಧರಣಿ ಕೈಬಿಟ್ಟು ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾದರು.

**ಶೂನ್ಯ ವೇಳೆ ಪ್ರಸ್ತಾವಗಳು**

6. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಕರ್ನಾಟಕ ಅಲೆಮಾರಿ, ಅರೆ ಅಲೆಮಾರಿ ಆಯೋಗದ ಬದಲಾಗಿ ಕರ್ನಾಟಕ ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಆಯೋಗ ಎಂಬ ಶೀರ್ಷಿಕೆಯಡಿ ಆಯೋಗ ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀಮತಿ ಹೇಮಲತಾ ನಾಯಕ್** ಅವರು ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಪಿ. ಹೆಚ್. ಪೂಜಾರ್** ಅವರು ಬಾಗಲಕೋಟೆ ರಾಷ್ಟ್ರೀಯ ಹೆದ್ದಾರಿ 367 ಶಿರೂರು ರೈಲ್ವೆಗೇಟ್ ಹತ್ತಿರ ನಿರ್ಮಾಣ ಹಂತದಲ್ಲಿರುವ ಮೇಲ್ಸೇತುವೆಯ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಐವನ್ ಡಿ'ಸೋಜಾ** ಅವರು ಕರ್ನಾಟಕ ರಾಜ್ಯದಲ್ಲಿಯೂ ಇತರ ರಾಜ್ಯಗಳಂತೆ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಗಿ ಕಡ್ಡಾಯಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ಕೆಎಂಎಫ್ ಉತ್ಪನ್ನ ನಂದಿನಿ ಹಾಲು ಗುಣಮಟ್ಟದಲ್ಲಿ ವ್ಯವಸ್ಥಿತ ರೀತಿಯಲ್ಲಿ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಪ್ರಸ್ತಾಪಿಸಿದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

## 6. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ

### ವಿಶೇಷ ಚರ್ಚೆ

ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಈ ಕೆಳಕಂಡ ಮಾನ್ಯ ಶಾಸಕರುಗಳು ವಿಶೇಷ ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಪಿ.ಹೆಚ್. ಪೂಜಾರ್

ಮಧ್ಯಾಹ್ನ 4.32 ಗಂಟೆಗೆ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಸಂಜೆ 5.20 ಗಂಟೆಯಲ್ಲಿ ಶ್ರೀ ಮಂಜುನಾಥ್ ಭಂಡಾರಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಸಂಜೆ 5.45 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿಯವರ ಪೀಠದಲ್ಲಿ ಆಸೀನರಾದರು.

2. ಶ್ರೀಮತಿ ಉಮಾಶ್ರೀ
3. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

ಸಂಜೆ 6.35 ಗಂಟೆಗೆ ಮಾನ್ಯ ಸಭಾಪತಿಯವರು**(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

### ಪ್ರಕಟಣೆ

3. ದಿನಾಂಕ: 12.12.2024 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

    - ನಾಳೆಯಿಂದ ಪ್ರತಿದಿನ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 7 ಗಂಟೆಯವರೆಗೆ ಸದನದ ಕಾರ್ಯಕಲಾಪಗಳನ್ನು ನಡೆಸಲಾಗುವುದು.

- ದಿನಾಂಕ:20.12.2024ರಿಂದ ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಾರಂಭವಾಗುತ್ತಿರುವ ಹಿನ್ನಲೆಯಲ್ಲಿ ಅಧಿವೇಶನವನ್ನು ದಿನಾಂಕ: 19.12.2024ರಂದು ಮುಕ್ತಾಯಗೊಳಿಸಲು ನಿರ್ಣಯಿಸಲಾಗಿದೆ.

- ಈ ಕೆಳಕಂಡ ವಿಷಯಗಳ ಮೇಲೆ ವಿಶೇಷ ಚರ್ಚೆ ನಡೆಸಲಾಗುವುದು.

    1) ದಿನಾಂಕ: 16.12.2024ರಂದು ಪ್ರಶ್ನೋತ್ತರದ ನಂತರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನಲೆಯಲ್ಲಿ ಅವರ ಕುರಿತು ವಿಶೇಷ ಚರ್ಚೆ

    2) ದಿನಾಂಕ:17 ಮತ್ತು 18ನೇ ಡಿಸೆಂಬರ್, 2024ರಂದು ಪ್ರಶ್ನೋತ್ತರ, ವಿಧೇಯಕಗಳ ಪರ್ಯಾಲೋಚನೆ, ಅಂಗೀಕಾರ ನಂತರ ಉತ್ತರ ಕರ್ನಾಟಕ ಭಾಗದ ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ, ಕಳಸಾ ಬಂಡೂರಿ ನೀರಾವರಿ ಯೋಜನೆಗಳ ಬಗ್ಗೆ ವಿಶೇಷ ಚರ್ಚೆ.

    3) ಮಕ್ಕಳ ಹಕ್ಕುಗಳ ಕುರಿತು

- ಸರ್ಕಾರದಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನು ಮಂಡಿಸಿ, ಚರ್ಚೆ ಹಾಗೂ ಅಂಗೀಕಾರ.

**ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ**

**ವಿಶೇಷ ಚರ್ಚೆ**

ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಈ ಕೆಳಕಂಡ ಮಾನ್ಯ ಶಾಸಕರುಗಳು ವಿಶೇಷ ಚರ್ಚೆಯಲ್ಲಿ ಭಾಗವಹಿಸಿದರು.

4. ಡಾ: ತಳವಾರ್ ಸಾಬಣ್ಣ

5. ಶ್ರೀಮತಿ ಹೇಮಲತಾ ನಾಯಕ್

## 07. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಕುರಿತು ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

ಮಾನ್ಯ ವಿರೋಧ ಪಕ್ಷದ ನಾಯಕರಾದ ಛಲವಾದಿ ಟಿ. ನಾರಾಯಣಸ್ವಾಮಿ ಮತ್ತು ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಡಿ.ಎಸ್. ಅರುಣ್, ಶ್ರೀ ಬಿ.ಜಿ. ಪಾಟೀಲ್, ಶ್ರೀ ಎನ್. ರವಿಕುಮಾರ್ ಹಾಗೂ ಇತರರು ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದದಿಂದ ರೈತರು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿರುವ ಕುರಿತು ಮುಂದುವರೆದ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಬಿ.ಕೆ. ಹರಿಪ್ರಸಾದ್
2. ಪ್ರತಾಪ್ ಸಿಂಹ ನಾಯಕ್ ಕೆ.
3. ಉಮಾಶ್ರೀ
4. ನಸೀರ್ ಅಹ್ಮದ್
5. ಕೆ.ಎ. ತಿಪ್ಪೇಸ್ವಾಮಿ
6. ಪಿ.ಹೆಚ್. ಪೂಜಾರ್

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರಾದ ಶ್ರೀ ಪಿ.ಹೆಚ್. ಪೂಜಾರ್ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

ಸದನವನ್ನು ರಾತ್ರಿ 10.05 ಗಂಟೆಯಲ್ಲಿ ಮುಂದೂಡಿ ದಿನಾಂಕ:13.12.2024ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಶುಕ್ರವಾರ, ದಿನಾಂಕ:13.12.2024

(04)

ಸದನವು ಬೆಳಗ್ಗೆ: 10.15 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಸಂತಾಪ ಸೂಚನೆ

ಮಾಜಿ ಉಪ ಸಭಾಪತಿಗಳು ಹಾಗೂ ಮಾಜಿ ಶಾಸಕರಾಗಿದ್ದ ಶ್ರೀ ಕೇಶವರಾವ್ ತಾತ್ಯ ನಿಟ್ಟೂರಕರ್ ಅವರು ನಿಧನರಾದುದಕ್ಕೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಲಾಯಿತು.

ಮಾನ್ಯ ಸಭಾನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತಿಯನ್ನು ವ್ಯಕ್ತಪಡಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಅವರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 2. ಪ್ರಶ್ನೋತ್ತರ

ದಿನಾಂಕ:13.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–Vರ 5ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 61(571) | ಶ್ರೀ ಟಿ.ಎನ್. ಜವರಾಯಿಗೌಡ ಪರವಾಗಿ ಶ್ರೀ ಕೆ.ಎ. ತಿಪ್ಪೇಸ್ವಾಮಿ |
| 2. | 62(615) | |
| 3. | 63(671) | |
| 4. | 64(659) | ಶ್ರೀ ಚಿದಾನಂದ ಎಂ.ಗೌಡ ಪರವಾಗಿ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. |
| 5. | 65(681) | ಕಾಲಾವಕಾಶ |
| 6. | 66(604) | |
| 7. | 67(567) | ಗೈರು ಹಾಜರಾತಿ |
| 8. | 68(619) | ಶ್ರೀ ಶರಣಗೌಡ ಬಯ್ಯಾಪುರ ಪರವಾಗಿ ಶ್ರೀ ಎ.ವಸಂತ ಕುಮಾರ್ |
| 9. | 69(636+689) | |
| 10. | 70(644) | |
| 11. | 71(609) | |
| 12. | 72(595) | |
| 13. | 73(661) | ವರ್ಗಾವಣೆ |
| 14. | 74(578) | ಗೈರು ಹಾಜರಿ |
| 15. | 75(594) | ವರ್ಗಾವಣೆ |

ದಿನಾಂಕ:13.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Vರ 5ನೇ ಪಟ್ಟಿಯ ಒಟ್ಟು 138 ಪ್ರಶ್ನೆಗಳ ಪೈಕಿ **65** ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

ದಿನಾಂಕ:10.12.2024ರಂದು ಸಮೂಹ–ಖಖರ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 114 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಮತ್ತು ದಿನಾಂಕ:11.12.2024ರಂದು ಸಮೂಹ–IIIರ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 88 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

### 3. ಶೂನ್ಯವೇಳೆ

1. **ಡಾ: ಧನಂಜಯ ಸರ್ಜಿ** ಅವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿ ನಂತರ ಶುಲ್ಕ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯದ ಅಡಿಕೆ ಬೆಳೆಗಾರರ ಹಿತರಕ್ಷಣೆ ಮಾಡಲು ಅಡಿಕೆ ಕುರಿತು ವೈಜ್ಞಾನಿಕ ಸಂಶೋಧನೆ ನಡೆಸಲು ತಂಡ ರಚಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಕೃಷ್ಣ ಭಾಗ್ಯ ಜಲನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಿಂದ ಆಲಮಟ್ಟಿಗೆ ಸ್ಥಳಾಂತರಿಸದೆ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ದಿನಾಂಕ:01.04.2006ರ ನಂತರ ವೇತನಾನುದಾನಕ್ಕೆ ಒಳಪಟ್ಟ ಅನುದಾನಿತ ಶಾಲಾ ಕಾಲೇಜುಗಳ ಬೋಧಕ ಬೋಧಕೇತರರಿಗೂ ಹಳೇ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ರಾಮೋಜಿಗೌಡ** ಅವರು ರಾಜ್ಯದ ಶಾಲಾ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೇಂದ್ರೀಯ ಪಠ್ಯಕ್ರಮ ಮಾದರಿಯಲ್ಲಿ ಗಣಿತ ಮತ್ತು ವಿಜ್ಞಾನವನ್ನು NCERT ಶಿಫಾರಸ್ಸಿನಂತೆ ಪರಿಷ್ಕರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀಮತಿ ಹೇಮಲತಾ ನಾಯಕ್** ಅವರು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಗೆ ಮೂಲ ಸೌಕರ್ಯಗಳನ್ನು ಬಲಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಡಿ.ಎಸ್. ಅರುಣ್** ಅವರು ರಾಜ್ಯ ಸಿವಿಲ್ ಸೇವೆ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ.2ರಷ್ಟು ಹುದ್ದೆಗಳನ್ನು ಮೀಸಲಿರಿಸಿ ಆದೇಶ ಹೊರಡಿಸಿದ್ದು, ವಿಳಂಬ ಮಾಡದೆ ಸದರಿ ಆದೇಶವನ್ನು ಜಾರಿಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಎಸ್.ವ್ಹಿ. ಸಂಕನೂರ** ಅವರು ರಾಜ್ಯದ ವಿಶ್ವವಿದ್ಯಾಲಯಗಳು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳಿಂದ ಅಂಕಪಟ್ಟಿ ನೀಡದಿರುವ/ವಿತರಿಸದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಎನ್. ರವಿಕುಮಾರ್** ಅವರು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಘೋಷಣೆ ಮಾಡಿರುವ ಎಲ್ಲಾ ಯೋಜನೆಗಳನ್ನು ಕೂಡಲೇ ಜಾರಿಗೆ ತರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಉತ್ತರಿಸಿದರು.

11. **ಶ್ರೀ ಎಂ. ನಾಗರಾಜು** ಅವರು ರಾಮದುರ್ಗ ತಾಲ್ಲೂಕಿನ ನೆರೆ ಸಂತ್ರಸ್ತರಿಗೆ ನಿರ್ಮಿಸಲಾಗಿದ್ದ ನವಗ್ರಾಮಕ್ಕೆಂದು ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಪಂಚಾಯ್ತಿಗೆ ಹಸ್ತಾಂತರಿಸದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಶ್ರೀ ಪಿ.ಹೆಚ್. ಪೂಜಾರ್** ಅವರು ಯುಕೆಪಿ ಯೋಜನೆಯ ಭೂಸ್ವಾಧೀನಕ್ಕೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳ ತ್ವರಿತ

ಇತ್ಯರ್ಥಕ್ಕೆ ಹೆಚ್ಚುವರಿಯಾಗಿ 06 ನ್ಯಾಯಾಲಯಗಳ ಸ್ಥಾಪನೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಮೊಟ್ಟೆ ಭಾಗ್ಯ ಯೋಜನೆಯಿಂದ ಶಿಕ್ಷಕರಿಗೆ ಆರ್ಥಿಕ ಸಮಸ್ಯೆ ಉಂಟಾಗಿರುವ ಬಗ್ಗೆ ದಿನಾಂಕ:09.12.2024ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಬಳ್ಳಾರಿ ನಗರದಲ್ಲಿ ನಿರ್ಮಿಸಿರುವ ಸಾಂಸ್ಕೃತಿಕ ಸಮುಚ್ಚಯಕ್ಕೆ ದಿ॥ ಎಂ.ಪಿ. ಪ್ರಕಾಶ್‌ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಪಿ.ಹೆಚ್. ಪೂಜಾರ್** ಅವರು ಮಾಜಿ ಸೈನಿಕರುಗಳ ಹಲವು ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಶೇ.50ರಷ್ಟು ಕಂದಾಯ ರಿಯಾಯಿತಿ ನೀಡುವ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಐವನ್ ಡಿ'ಸೋಜಾ** ಅವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ 200 ನೌಕರರಿಗೆ ನಾಲ್ಕು ವರ್ಷಗಳಿಂದ ನಿವೃತ್ತಿ ವೇತನ ಮತ್ತು ಉಪದಾನ ನೀಡದಿರುವ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಡಾ: ತಳವಾರ್ ಸಾಬಣ್ಣ** ಅವರು 2006ರ ಪೂರ್ವ ನೇಮಕವಾಗಿ ತದನಂತರ ಅನುದಾನಕ್ಕೊಳಪಟ್ಟು, ಹಳೆ ಪಿಂಚಣಿ ಸೌಲಭ್ಯದಿಂದ ವಂಚಿತರಾದ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಪಿಂಚಣಿ ಸಮಸ್ಯೆಯ ಬಗ್ಗೆ ದಿನಾಂಕ:12.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಐವನ್ ಡಿ'ಸೋಜಾ** ಅವರು ಕರ್ನಾಟಕ ರಾಜ್ಯದಲ್ಲಿಯೂ ಇತರ ರಾಜ್ಯಗಳಂತೆ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಗಿ ಕಡ್ಡಾಯಗೊಳಿಸುವ ಬಗ್ಗೆ ದಿನಾಂಕ:12.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ಕೆಳಕಂಡ ವರದಿಗಳನ್ನು ಮಂಡಿಸಿದರು.

ಅ. 2023–24ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ–I ಮತ್ತು II)

ಆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಯ ಲೆಕ್ಕಪರಿಶೋಧನಾ ವರದಿ(2024ರ ವರದಿ ಸಂಖ್ಯೆ–4)

ಇ. ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ(2024ರ ವರದಿ ಸಂಖ್ಯೆ–5)

ಈ. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ (2024ರ ವರದಿ ಸಂಖ್ಯೆ–6)

ಉ. ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್) (2024ರ ವರದಿ ಸಂಖ್ಯೆ–7)

ಊ. ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ (2024ರ ವರದಿ ಸಂಖ್ಯೆ–8)

ಋ. "ಕರ್ನಾಟಕದಲ್ಲಿನ ರಾಜ್ಯ ಸಂರಕ್ಷಿತ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಸಂರಕ್ಷಣೆ"ಯ ಮೇಲಿನ ವರದಿ (2024ರ ವರದಿ ಸಂಖ್ಯೆ:9)

ಎ. 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಕಾರ್ಯನಿರ್ವಹಣಾ ವರದಿ (2024ರ ವರದಿ ಸಂಖ್ಯೆ–10)

**6. ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಅಧ್ಯಕ್ಷರು, ವಿಶೇಷ ಸದನ ಸಮಿತಿ) ಅವರು:–**

"ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.10.2024ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವವನ್ನು ಮಂಡಿಸಿದರು.

ಸದನದ ಸಹಮತಿ ಪಡೆಯುವ ಪ್ರಸ್ತಾವವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 07. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ವಿಶೇಷ ಚರ್ಚೆ

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ನಡೆದ ವಿಶೇಷ ಚರ್ಚೆಯಲ್ಲಿ ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

6. ಕೆ.ಎ. ತಿಪ್ಪೇಸ್ವಾಮಿ

ಮಧ್ಯಾಹ್ನ 12.23 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

7. ಪ್ರಕಾಶ್ ಬಾಬಣ್ಣ ಹುಕ್ಕೇರಿ

8. ಕೆ.ಎಸ್. ನವೀನ್

ಮಧ್ಯಾಹ್ನ 1.00 ಗಂಟೆಯಲ್ಲಿ **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 1.20 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಕೆ.ಎ. ತಿಪ್ಪೇಸ್ವಾಮಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ.

ಶ್ರೀಯುತರುಗಳಾದ:

9. ಎಂ. ನಾಗರಾಜು

10. ಕೇಶವ ಪ್ರಸಾದ್ ಎಸ್

11. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

12. ಪ್ರತಾಪ್ ಸಿಂಹ ನಾಯಕ್ ಕೆ.

**"ಗದ್ದಲ"**

**08. ಗಮನ ಸೆಳೆಯುವ ಸೂಚನೆಗಳು**

1. **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಗೊಳಪಡುವ ಉಚ್ಚ ನ್ಯಾಯಾಲಯ ಪೀಠವನ್ನು ಮಂಗಳೂರಿನಲ್ಲಿ ಸ್ಥಾಪಿಸುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆದರು.

   ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

2. **ಶ್ರೀ ಶಾಂತರಾಮ್ ಬುಡ್ನ** ಸಿದ್ಧಿ ಅವರು ಕರ್ನಾಟಕ ಅರಣ್ಯ ಕಾಯ್ದೆ 1962 ಕಲಂ 28ರ ಅಡಿ ದಿನಾಂಕ:27.04.1978ರ ಪೂರ್ವದಲ್ಲಿ ಅರಣ್ಯ ಅತಿಕ್ರಮಣ ಪ್ರದೇಶವನ್ನು ಸಕ್ರಮಗೊಳಿಸಲಾಗಿದ್ದಾಗ್ಯೂ disforest donatory ಜಾರಿಯಾಗದಿರುವುದರಿಂದ ರೈತರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

   ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಚರ್ಚೆಯಲ್ಲಿ ಭಾಗವಹಿಸಿದರು.

   ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

   ಮಾನ್ಯ ಶಾಸಕರಾದ ಶ್ರೀ ಶಾಂತರಾಮ್ ಬುಡ್ನ ಸಿದ್ಧಿ ಅವರು ಸ್ಪಷ್ಟೀಕರಣ ಕೋರಿದರು.

   ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

3. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಬಾಗಲಕೋಟೆ ಮತ್ತು ವಿಜಯಪುರ ಅವಳಿ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳಾದ ಬಾದಾಮಿ, ಬನಶಂಕರಿ, ಐಹೊಳೆ, ಪಟ್ಟದಕಲ್ಲು, ಗೋಲಗುಂಬಜ್, ಶಿವನ ಮಂದಿರ, ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಬಗೆ ಬಗೆಯ ಪಕ್ಷಿಯ ತಾಣಗಳನ್ನು ನಿರ್ಮಿಸಿ ಅಭಿವೃದ್ಧಿಪಡಿಸುವ ಕುರಿತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಗಮನ ಸೆಳೆದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸ್ಪಷ್ಟೀಕರಣ ನೀಡಿದರು.

### 09. ನಿಯಮ 330ರ ಮೇರೆಗೆ

01. **ಡಾ: ತಳವಾರ್ ಸಾಬಣ್ಣ** ಅವರು ಅತ್ಯಂತ ಹಿಂದುಳಿದ ಜಾತಿಗಳನ್ನು ಒಳಗೊಂಡ ಪ್ರವರ್ಗ–1 ಗುಂಪಿಗೆ ಜನಸಂಖ್ಯೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಿನ್ನಲೆ ಪರಿಗಣಿಸದೆ ಅವೈಜ್ಞಾನಿಕವಾಗಿ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
2. ಬಿ.ಕೆ. ಹರಿಪ್ರಸಾದ್
3. ಕೆ.ಎ. ತಿಪ್ಪೇಸ್ವಾಮಿ
4. ಎನ್. ರವಿಕುಮಾರ್
5. ಎಂ. ನಾಗರಾಜು

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಸ್ಪಷ್ಟೀಕರಣ ನೀಡಿದರು.

**ಗಮನ ಸೆಳೆಯುವ ಸೂಚನೆ**

4. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಎನ್. ರವಿಕುಮಾರ್, ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ, ಡಾ: ಧನಂಜಯ ಸರ್ಜಿ ಹಾಗೂ ಇತರರುಗಳು** ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ–2ಎ ಮೀಸಲಾತಿ ನೀಡುವ ವಿಷಯದ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ನಿರಾಣಿ ಹಣಮಂತ್ ರುದ್ರಪ್ಪ
2. ಎಸ್.ವ್ಹಿ. ಸಂಕನೂರ
3. ಎನ್. ರವಿಕುಮಾರ್
4. ಡಾ: ಧನಂಜಯ ಸರ್ಜಿ

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸಚಿವರು ನೀಡಿದ ಉತ್ತರವನ್ನು ವಿರೋಧಿಸಿ ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಸಂಜೆ 7.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:16.12.2024ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

*****

42

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಸೋಮವಾರ, ದಿನಾಂಕ:16.12.2024

(05)

ಸದನವು ಬೆಳಗ್ಗೆ: 11.00 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**2. ಸಂತಾಪ ಸೂಚನೆ**

ಖ್ಯಾತ ತಬಲವಾದಕರಾದ ಝಾಕೀರ್ ಹುಸೇನ್ ಅವರು ನಿಧನರಾದುದಕ್ಕೆ ಸಂತಾಪ ಸೂಚನಾ ನಿರ್ಣಯವನ್ನು ಮಾನ್ಯ ಸಭಾಪತಿಯವರು ಮಂಡಿಸಿದರು.

ಮಾನ್ಯ ಸಭಾನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತಿಯನ್ನು ವ್ಯಕ್ತಪಡಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಅವರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

**"ಧರಣಿ"**

ಪಂಚಮಸಾಲಿ ವರ್ಗವನ್ನು 2ಎಗೆ ಸೇರಿಸುವ ಸಂಬಂಧ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಲಾಠಿ ಚಾರ್ಜ್ ಮಾಡಲಾಗಿದ್ದು,

ಕ್ಷಮೆಯಾಚಿಸಬೇಕೆಂದು ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಮಾನ್ಯ ಗೃಹ ಸಚಿವರಿಂದ ಮಧ್ಯಾಹ್ನ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದ್ದನ್ನು ಒಪ್ಪಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಮಾನ್ಯ ಶಾಸಕರುಗಳು ತಮ್ಮ ಆಸನಗಳಿಗೆ ಹಿಂತಿರುಗಿದರು.

## 2. ಪ್ರಶ್ನೋತ್ತರ

ದಿನಾಂಕ:16.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 6ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 76(836) | ಗೈರು ಹಾಜರಿ |
| 2. | 77(732) | |
| 3. | 78(780) | |
| 4. | 79(859) | |
| 5. | 80(880) | |
| 6. | 81(887) | |
| 7. | 82(783+775) | |
| 8. | 83(802) | |
| 9. | 84(762) | ಗೈರು ಹಾಜರಿ |
| 10. | 85(782) | |
| 11. | 86(878) | |
| 12. | 87(721) | |
| 13. | 88(822) | |

14. 89(804)

15. 90(745)

**ದಿನಾಂಕ:12.12.2024ರ 4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 50(476)

**ದಿನಾಂಕ:10.12.2024ರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 22(197)

ದಿನಾಂಕ:16.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 6ನೇ ಪಟ್ಟಿಯ ಒಟ್ಟು 158 ಪ್ರಶ್ನೆಗಳ ಪೈಕಿ **56** ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

ಅಧಿಕಾರಿಗಳ ಗ್ಯಾಲರಿಯಲ್ಲಿ ಇಲಾಖಾಧಿಕಾರಿಗಳು ಹಾಜರಿರುವುದಿಲ್ಲವೆಂದು ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಪ್ರಸ್ತಾಪಿಸಿದರು.

**3. ಶೂನ್ಯವೇಳೆ ಪ್ರಸ್ತಾವಗಳು**

**1.** **ಶ್ರೀ ಐವನ್ ಡಿ'ಸೋಜಾ** ಅವರು ಕಂಬಳ ಕ್ರೀಡೆಗಳಿಗೆ 2024–25ನೇ ಸಾಲಿನಲ್ಲಿ ತಲಾ 5 ಲಕ್ಷ ರೂ. ಸಹಾಯಧನ ನೀಡುವ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

ಮಧ್ಯಾಹ್ನ 1.25 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

**2.** **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಗಗಅಒಅ ಸರ್ವರ್‌ನಿಂದಾಗಿ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕವು

ವಿಶ್ವವಿದ್ಯಾಲಯಕ್ಕೆ ಸಂದಾಯವಾಗದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಈಗಾಗಲೇ ಭರ್ತಿ ಮಾಡಿರುವ ಅರ್ಜಿ ಮತ್ತು ಶುಲ್ಕವನ್ನು ಪರಿಗಣಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ಪೊಲೀಸ್ ಇಲಾಖೆಯ ವರ್ಗಾವಣೆಯಲ್ಲಿ ಪತಿ–ಪತ್ನಿ ಪ್ರಕರಣಗಳಿಗೆ ಮುಕ್ತ ಅವಕಾಶ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಡಾ: ತಳವಾರ್ ಸಾಬಣ್ಣ** ಅವರು ಕಲಬುರಗಿ ಜಿಲ್ಲೆಯಲ್ಲಿ ರಕ್ತದ ಕೊರತೆ ನೀಗಿಸಲು ಸಂಘ ಸಂಸ್ಥೆಗಳ ಸಹಕಾರದಿಂದ ಜನಜಾಗೃತಿ ಮೂಡಿಸಿ ರಕ್ತದ ಸಂಗ್ರಹ ಹೆಚ್ಚಿಸಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

5. **ಶ್ರೀ ಶಶೀಲ್ ಜಿ. ನಮೋಶಿ** ಅವರು 1995ರ ನಂತರ ಪ್ರಾರಂಭವಾಗಿರುವ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ನಿಗಮಗಳಿಗೆ ಹಂಚಿಕೆಯಾಗಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಎಂ. ನಾಗರಾಜು** ಅವರು ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದಲ್ಲಿ ಪ್ರೌಢ ಶಾಲೆಯನ್ನು ಪ್ರಾರಂಭಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

8. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಸಾರ್ವತ್ರಿಕ ಆರೋಗ್ಯ ರಕ್ಷಣೆ ಸಲುವಾಗಿ ಆರೋಗ್ಯ ವಿಮೆಯ ಬಗ್ಗೆ ಅಧ್ಯಯನ ಸೇರಿದಂತೆ ಆರೋಗ್ಯ ಹಕ್ಕು ಕಾಯ್ದೆ ಜಾರಿಗೊಳಿಸುವ ಕುರಿತು ಹಲವು ಸಂಘಟನೆಗಳ ಹಕ್ಕೊತ್ತಾಯದ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

9. **ಶ್ರೀಮತಿ ಉಮಾಶ್ರೀ** ಅವರು ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಕೆಸಿಎಸ್ಆರ್ ನಿಯಮಗಳ ರೀತ್ಯಾ ನೇಮಕಾತಿ ಪ್ರಕ್ರಿಯೆ ಕೈಗೊಂಡು ಸಿಬ್ಬಂದಿಗಳನ್ನು ನೇಮಕ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

10. **ಶ್ರೀ ಸಿ.ಟಿ. ರವಿ** ಅವರು ನ್ಯಾ. ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸಿ ಒಳ ಮೀಸಲು ಜಾರಿಗೆ ತರಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

### 4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀಮತಿ ಹೇಮಲತಾ ನಾಯಕ್** ಅವರು ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವ ಬಗ್ಗೆ ದಿನಾಂಕ:12.12.2024ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ನಂದಿಕೂರು–ಕಾಸರಗೋಡು ವಿದ್ಯುತ್ ಲೈನ್‌ಗೆ ಪರ್ಯಾಯ ಯೋಜನೆ ರೂಪಿಸುವ ಬಗ್ಗೆ ದಿನಾಂಕ:12.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ದಿನಾಂಕ:13.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯದ ಅಡಿಕೆ ಬೆಳೆಗಾರರ ಹಿತರಕ್ಷಣೆ ಮಾಡಲು ಅಡಿಕೆ ಕುರಿತು ವೈಜ್ಞಾನಿಕ ಸಂಶೋಧನೆ ನಡೆಸಲು ತಂಡ ರಚಿಸುವ ಬಗ್ಗೆ ಪ್ರಸ್ತಾಪಿಸಿದ್ದ ದಿನಾಂಕ:13.12.2024 ರಂದು ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

### 5. ನಿಲುವಳಿ ಸೂಚನೆ

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ರಾಜ್ಯದ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರು ಮತ್ತು ನವಜಾತ ಶಿಶುಗಳು ಮರಣ ಹೊಂದುತ್ತಿರುವ ಹಾಗೂ ಉತ್ತಮ ಗುಣಮಟ್ಟದ ಔಷಧಿಗಳು ಲಭ್ಯವಿಲ್ಲದಿರುವ ಬಗ್ಗೆ ನಿಯಮ 59ರಡಿ ಪ್ರಸ್ತಾಪಿಸಲು ಅನುಮತಿ ಕೋರಿದರು.

ನಿಲುವಳಿ ಸೂಚನೆಯನ್ನು ನಿಯಮ 72ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## 06. ವಿಶೇಷ ಚರ್ಚೆ

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನಲೆಯಲ್ಲಿ ಅವರ ಕುರಿತು ವಿಶೇಷ ಚರ್ಚೆ ಪ್ರಾರಂಭಿಸಿದರು.

ಮಧ್ಯಾಹ್ನ 2.00 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಣೇಶ್)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.20 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 7. ಗಮನ ಸೆಳೆಯುವ ಸೂಚನೆ

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಎನ್. ರವಿಕುಮಾರ್, ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ, ಡಾ: ಧನಂಜಯ ಸರ್ಜಿ ಹಾಗೂ ಇತರರುಗಳು** ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ–2ಎ ಮೀಸಲಾತಿ ನೀಡುವ ವಿಷಯದ ಕುರಿತು ದಿನಾಂಕ:13.12.2024ರ ಮುಂದುವರೆದ ಚರ್ಚೆಗೆ ಮಾನ್ಯ ಗೃಹ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
2. ಶ್ರೀ ಸಿ.ಟಿ. ರವಿ

ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸಭಾತ್ಯಾಗ ಮಾಡಿದರು.

**ವಿಶೇಷ ಚರ್ಚೆ**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನಲೆಯಲ್ಲಿ ಅವರ ಕುರಿತ ಮುಂದುವರೆದ ವಿಶೇಷ ಚರ್ಚೆಯಲ್ಲಿ ಈ ಕೆಳಕಂಡ ಮಾನ್ಯ ಶಾಸಕರುಗಳು ಭಾಗವಹಿಸಿದರು.

1. ಶ್ರೀ ಬಿ.ಕೆ. ಹರಿಪ್ರಸಾದ್

ಮಧ್ಯಾಹ್ನ 3.55 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

2. ಶ್ರೀ ಸಿ.ಟಿ. ರವಿ
3. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಸಂಜೆ 5.25 ಗಂಟೆಯಲ್ಲಿ ಶ್ರೀ ಡಿ.ಎಸ್. ಅರುಣ್ ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಸಂಜೆ 5.30 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

4. ಶ್ರೀಮತಿ ಉಮಾಶ್ರೀ
5. ಶ್ರೀ ಎನ್. ರವಿಕುಮಾರ್

ಸಂಜೆ 6.00 ಗಂಟೆಗೆ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

6. ಡಾ: ಧನಂಜಯ ಸರ್ಜಿ
7. ಶ್ರೀ ಐವನ್ ಡಿ'ಸೋಜಾ
8. ಶ್ರೀಮತಿ ಬಲ್ಕೀಸ್ ಬಾನು

9. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಸಂಜೆ 6.52 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

10. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

11. ಶ್ರೀ ಪಿ.ಹೆಚ್. ಪೂಜಾರ್

ಸಂಜೆ 7.30 ಗಂಟೆಯಲ್ಲಿ ಶ್ರೀಮತಿ ಭಾರತಿಶೆಟ್ಟಿ ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

12. ಶ್ರೀ ಎಂ. ನಾಗರಾಜು

13. ಶ್ರೀ ಕೆ.ಎಸ್. ನವೀನ್

14. ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ಸದನವನ್ನು ರಾತ್ರಿ 8.11 ಗಂಟೆಗೆ ಮುಂದೂಡಿ ದಿನಾಂಕ:17.12.2024ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು**(ಶ್ರೀಮತಿ ಭಾರತಿ ಶೆಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಂಗಳವಾರ, ದಿನಾಂಕ:17.12.2024

(06)

ಸದನವು ಬೆಳಗ್ಗೆ: 10.20 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**3. ಸಂತಾಪ ಸೂಚನೆ**

ಪದ್ಮಶ್ರೀ ಪುರಸ್ಕೃತ ತುಳಸಿಗೌಡ ಅವರು ನಿಧನರಾದುದಕ್ಕೆ ಸಂತಾಪ ಸೂಚನಾ ನಿರ್ಣಯವನ್ನು ಮಾನ್ಯ ಸಭಾಪತಿಯವರು ಮಂಡಿಸಿದರು.

ಮಾನ್ಯ ಸಭಾನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತಿಯನ್ನು ವ್ಯಕ್ತಪಡಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಅವರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

**4. ಪ್ರಕಟಣೆ**

**ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:16.12.2024ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024
2. ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024
3. ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದುಪಡಿ) ವಿಧೇಯಕ, 2024
4. ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
5. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024
6. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024

## 3. ಪ್ರಶ್ನೋತ್ತರ

ದಿನಾಂಕ:17.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 7ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 91(906) ಅರ್ಧಗಂಟೆ ಕಾಲಾವಧಿ ಚರ್ಚೆ
2. 92(953)
3. 93(890)
4. 94(961)

5. 95(905)

6. 96(938)

7. 97(987) ವರ್ಗಾವಣೆ

8. 98(936)

9. 99(942)

10. 100(993)

11. 101(965)

12. 102(962)

13. 103(951) ತಡೆಹಿಡಿಯಲಾಯಿತು

14. 104(896)

15. 105(928)

ದಿನಾಂಕ:17.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 7ನೇ ಪಟ್ಟಿಯ ಒಟ್ಟು 105 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 4. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಜನರು ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)** ಅವರು ಕೊಡಗು ಜಿಲ್ಲೆಯ ವಿವಿಧ ಪಂಚಾಯ್ತಿ ವ್ಯಾಪ್ತಿಯ ಜಾಗಗಳನ್ನು ಮೀಸಲು ಅರಣ್ಯ

ಪ್ರದೇಶವೆಂದು ಹೊರಡಿಸಿರುವ ಆದೇಶಗಳನ್ನು ಹಿಂಪಡೆಯುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಡಾ: ಧನಂಜಯ ಸರ್ಜಿ, ಶ್ರೀ ಹೆಚ್.ಎಸ್. ಗೋಪಿನಾಥ್ ಹಾಗೂ ಶ್ರೀ ಎಂ. ನಾಗರಾಜು** ಅವರುಗಳು ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಬೆಳ್ತಂಗಡಿ ತಾಲ್ಲೂಕಿನ ಬಾಂಜಾರು ಮಲೆಕುಡಿಯ ಕಾಲೋನಿಯಲ್ಲಿ ವಾಸಿಸುವ ಸಮುದಾಯದವರಿಗೆ ಮಂಜೂರಾಗಿರುವ ಜಮೀನಿನ ವಿರುದ್ಧ ಸಲ್ಲಿಸಿರುವ ರಿಟ್ ಅರ್ಜಿಯನ್ನು ಹಿಂಪಡೆಯುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

5. **ಶ್ರೀಮತಿ ಹೇಮಲತಾ ನಾಯಕ್** ಅವರು ಪ್ರಾಥಮಿಕ ಹಂತದಲ್ಲಿಯೇ ಶಾಲಾ ಮಕ್ಕಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ನೀಡುವ ಬಗ್ಗೆ ಸೂಕ್ತ ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

6. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ದೋಷಕ್ಕೆ ಕಾರಣರಾದವರ ಮೇಲೆ ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಡಿ.ಎಸ್. ಅರುಣ್** ಅವರು ಮಲೆನಾಡು ಗಿಡ್ಡ ತಳಿ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ, ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

8. **ಶ್ರೀ ಶರವಣ ಟಿ.ಎ.** ಅವರು ಬಿಬಿಎಂಪಿ ಸೇರಿದಂತೆ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಿಲಿಕ್ವಿಂಶ್ ಡೀಡ್ ಮೂಲಕ ನೋಂದಣಿ ಮಾಡಿಸಲು ಅನುಕೂಲ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಉತ್ತರ ಕೊಡಿಸುವುದಾಗಿ ತಿಳಿಸಿದರು.

**ಪ್ರಕಟಣೆ**

**ಮಾನ್ಯ ಸಭಾಪತಿಯವರು:**

ಕರ್ನಾಟಕ ಸುವರ್ಣ ಸಂಭ್ರಮದ ಸವಿನೆನಪಿನಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ತಮಗೆ ಹೊಸ ಅಪರಾಧಿಕ ಕಾನೂನುಗಳ ಕೈಪಿಡಿ ಮತ್ತು ಭಾರತ ಸಂವಿಧಾನದ ಕೈಪಿಡಿ ಪುಸ್ತಕಗಳನ್ನು ನೀಡಲು ಹರ್ಷಿಸುತ್ತೇನೆ.

ಭಾರತ ಸರ್ಕಾರವು ಜಾರಿಗೆ ತಂದಿರುವ ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ಸಾಕ್ಷಿ ಅಧಿನಿಯಮ, 2023ರ ಸಮಗ್ರ ಮಾಹಿತಿಯನ್ನು ಒಳಗೊಂಡ ಹೊಸ ಅಪರಾಧಿಕ ಕಾನೂನುಗಳ ಕೈಪಿಡಿ ಹಾಗೂ ಭಾರತ ಸಂವಿಧಾನ ಕೈಪಿಡಿ ಪುಸ್ತಕಗಳನ್ನು ಉಪಯೋಗಿಸಿಕೊಂಡು ಚಿಂತಕರ ಚಾವಡಿ ಹಾಗೂ ಪ್ರಾಜ್ಞರ

ಮನೆಯಾಗಿರುವ ವಿಧಾನ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ತಾವು ಇನ್ನಷ್ಟು ಕ್ರಿಯಾಶೀಲರಾಗಿ ಮೌಲ್ಯಯುತ ಚರ್ಚೆಯಲ್ಲಿ ತೊಡಗಿಸಿಕೊಳ್ಳಲು ಸಹಕಾರಿ ಆಗುತ್ತದೆ ಎಂದು ಭಾವಿಸುತ್ತೇನೆ.

**05. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024ನ್ನು ಹಾಗೂ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

01. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024
02. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ(ಎರಡನೇ ತಿದ್ದುಪಡಿ) ವಿಧೇಯಕ, 2024
03. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024
04. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024
05. ಚಾಣಕ್ಯ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2024
06. ಕರ್ನಾಟಕ ಅಂತರ್ಜಲ(ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2024

ಮಧ್ಯಾಹ್ನ 12.16 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

## 6. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಕೆ.ಎಸ್. ನವೀನ್** ಅವರು ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ ದಿನಾಂಕ:09.12.2024ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ರಾಜ್ಯದ ವಿಶ್ವವಿದ್ಯಾಲಯಗಳು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳಿಂದ ಅಂಕಪಟ್ಟಿ ನೀಡದಿರುವ/ವಿತರಿಸದಿರುವ ಬಗ್ಗೆ ದಿನಾಂಕ:13.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ಪೊಲೀಸ್ ಇಲಾಖೆಯ ವರ್ಗಾವಣೆಯಲ್ಲಿ ಪತಿ–ಪತ್ನಿ ಪ್ರಕರಣಗಳಿಗೆ ಮುಕ್ತ ಅವಕಾಶ ನೀಡುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 7. ವಿತ್ತೀಯ ಕಾರ್ಯಕಲಾಪ

2024–25ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಬೇಡಿಕೆಗಳನ್ನು ಮತ್ತು 2024–25ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಗಳನ್ನು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

## 8. ಸಚಿವರ ಹೇಳಿಕೆ

ಶ್ರೀ ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ಹೇಳಿಕೆ ನೀಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಈ ಕೆಳಕಂಡ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಎಸ್.ಎಲ್. ಭೋಜೇಗೌಡ
2. ಸಿ.ಟಿ. ರವಿ
3. ಭಾರತಿ ಶೆಟ್ಟಿ
4. ಹೇಮಲತಾ ನಾಯಕ್
5. ಎನ್. ರವಿಕುಮಾರ್
6. ಕೆ.ಎಸ್. ನವೀನ್
7. ಶರವಣ ಟಿ.ಎ
8. ಡಾ: ಧನಂಜಯ ಸರ್ಜಿ
9. ಗೋವಿಂದರಾಜು
10. ಪಿ.ಹೆಚ್. ಪೂಜಾರ್
11. ಕೆ.ಎ. ತಿಪ್ಪೇಸ್ವಾಮಿ
12. ಡಾ: ಚಿದಾನಂದ್ ಎಂ. ಗೌಡ
13. ಶಶೀಲ್ ಜಿ. ನಮೋಶಿ
14. ಪ್ರಕಾಶ್ ಬಾಬಣ್ಣ ಹುಕ್ಕೇರಿ
15. ಐವನ್ ಡಿ'ಸೋಜಾ
16. ಉಮಾಶ್ರೀ
17. ಎಸ್. ರವಿ
18. ಡಾ: ಎಂ.ಆರ್. ಸೀತಾರಾಂ

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

**9. ವರದಿಯನ್ನೊಪ್ಪಿಸುವುದು**

ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 2023–24ನೇ ಹಾಗೂ 2024–25ನೇ ಸಾಲಿನ 39, 40, 41 ಹಾಗೂ 42ನೇ ವರದಿಗಳನ್ನು ಮಾನ್ಯ ಶಾಸಕರಾದ ಶ್ರೀ ಗೋವಿಂದರಾಜು ಅವರು ಸದನಕ್ಕೆ ಒಪ್ಪಿಸಿದರು.

**10. ಶಾಸನ ರಚನೆ**

**ವಿಧೇಯಕವನ್ನು ಹಿಂಪಡೆಯುವುದು**

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ, 2024ನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಮಂಡಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಹಿಂಪಡೆಯಲಾಯಿತು.

ಮಧ್ಯಾಹ್ನ 2.12 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

01. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎಸ್.ಎಲ್. ಭೋಜೇಗೌಡ
2. ಶ್ರೀ ಕೆ.ಎಸ್. ನವೀನ್
3. ಶ್ರೀ ಶರವಣ ಟಿ.ಎ.
4. ಶ್ರೀ ಕೆ.ಎ. ತಿಪ್ಪೇಸ್ವಾಮಿ
5. ಶ್ರೀ ಕೇಶವ ಪ್ರಸಾದ್ ಎಸ್
6. ಶ್ರೀ ಹೆಚ್.ಎಸ್. ಗೋಪಿನಾಥ್

ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

02. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಪಿ.ಹೆಚ್. ಪೂಜಾರ್
2. ಶ್ರೀ ಶರವಣ ಟಿ.ಎ.
3. ಶ್ರೀ ಕೇಶವ ಪ್ರಸಾದ್ ಎಸ್
4. ಶ್ರೀ ಕೆ.ಎಸ್. ನವೀನ್
5. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

03. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ"** ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಡಾ: ತಳವಾರ್ ಸಾಬಣ್ಣ

ಸಂಜೆ 5.15 ಗಂಟೆಯಲ್ಲಿ ಶ್ರೀ ಮಂಜುನಾಥ್ ಭಂಡಾರಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

2. ಶ್ರೀ ಕೇಶವ ಪ್ರಸಾದ್ ಎಸ್

ಸಂಜೆ 5.20 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

04. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಬಿ.ಕೆ. ಹರಿಪ್ರಸಾದ್
2. ಶ್ರೀ ಸಿ.ಟಿ. ರವಿ
3. ಡಾ: ತಳವಾರ್ ಸಾಬಣ್ಣ

4. ಶ್ರೀ ಕೆ.ಎ. ತಿಪ್ಪೇಸ್ವಾಮಿ

5. ಶ್ರೀ ನಸೀರ್ ಅಹ್ಮದ್

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

05. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಗೋವಿಂದರಾಜು

2. ಡಾ: ಧನಂಜಯ ಸರ್ಜಿ

3. ಶ್ರೀ ಕೆ.ಎಸ್. ನವೀನ್

4. ಶ್ರೀ ಸಿ.ಟಿ. ರವಿ

5. ಶ್ರೀ ಎನ್. ರವಿಕುಮಾರ್

6. ಶ್ರೀ ಐವನ್ ಡಿ'ಸೋಜಾ

7. ಶ್ರೀಮತಿ ಉಮಾಶ್ರೀ

8. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಸದನವನ್ನು ಸಂಜೆ 6.35 ಗಂಟೆಯಲ್ಲಿ ಮುಂದೂಡಿ ದಿನಾಂಕ:18.12.2024ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# **ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಬುಧವಾರ, ದಿನಾಂಕ:18.12.2024

(07)

ಸದನವು ಬೆಳಗ್ಗೆ: 11.50 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**5. ಪ್ರಕಟಣೆ**

**ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **"ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024"ನ್ನು ತಿದ್ದುಪಡಿಯೊಂದಿಗೆ** ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024
2. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024
3. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024

4. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
5. ಕರ್ನಾಟಕ ಧನವಿನಿಯೋಗ (ಸಂ.5) ವಿಧೇಯಕ, 2024
6. ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದುಪಡಿ) ವಿಧೇಯಕ, 2024
7. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024

## 2. ಪ್ರಶ್ನೋತ್ತರ

ದಿನಾಂಕ:18.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 8ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 106(1015)
2. 107(1083)

ಮಧ್ಯಾಹ್ನ 12.15 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

3. 108(1098+1121)
4. 109(1073)
5. 110(1102)
6. 111(1046)
7. 112(1009)
8. 113(1019)
9. 114(1107)
10. 115(1057)

11. 116(1112)

12. 117(1067)

13. 118(1024) ಗೈರು ಹಾಜರಿ

14. 119(1093)

15. 120(1013) ಗೈರು ಹಾಜರಿ

**ದಿನಾಂಕ:09.12.2024ರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

2. 8(25)

**ದಿನಾಂಕ:17.12.2024ರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

2. 103(951)

3. 104(896)

4. 105(928)

ದಿನಾಂಕ:18.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 8ನೇ ಪಟ್ಟಿಯ ಒಟ್ಟು 122 ಪ್ರಶ್ನೆಗಳ ಪೈಕಿ 82 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**3. ಶೂನ್ಯವೇಳೆ ಪ್ರಸ್ತಾವಗಳು**

1. **ಶ್ರೀ ಗೋವಿಂದರಾಜು** ಅವರು ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)** ಅವರು ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ವಂಚಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

3. **ಶ್ರೀ ಜಗದೇವ್ ಗುತ್ತೇದಾರ್** ಅವರು ಕಾಳಗಿ ಹಾಗೂ ಅಂಕಲಗಾ ಏತ ನೀರಾವರಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು.

4. **ಶ್ರೀ ಐವನ್ ಡಿ'ಸೋಜಾ** ಅವರು ಮೂಲಗೇಣಿದಾರರು ಸಲ್ಲಿಸಿರುವ ಅರ್ಜಿಗಳನ್ನು ಇತ್ಯರ್ಥಪಡಿಸಲು ವಿಶೇಷ ಅಭಿಯೋಜಕರನ್ನು ನೇಮಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಪಿ.ಹೆಚ್. ಪೂಜಾರ್** ಅವರು ಆರೋಗ್ಯ ಇಲಾಖೆಯ ಆಯುಷ್ಮಾನ್ ಯೋಜನೆಯಡಿಯಲ್ಲಿ ಹಿರಿಯ ನಾಗರಿಕರಿಗೆ ಸೂಕ್ತ ಸೇವೆಯನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಬಿ.ಜಿ. ಪಾಟೀಲ್** ಅವರು ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು.

7. **ಶ್ರೀ ರಾಮೋಜಿಗೌಡ** ಅವರು ಅಂಗವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ವಿಶೇಷ ಶಿಕ್ಷಕರ ತರಬೇತಿ ಪಡೆದ, ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಮಂಜುನಾಥ್ ಭಂಡಾರಿ** ಅವರು ನಡಿಪಟ್ಟ-ಕಾಡಿಪಟದ ಅರಬ್ಬಿ ಸಮುದ್ರ ಮತ್ತು ಕಾಮಿನಿ ಹೊಳೆ ನಡುವಿನ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಸಿ.ಎನ್. ಮಂಜೇಗೌಡ** ಅವರು **"**ಕ್ಷೀರಧಾರೆ ಯೋಜನೆ**"**ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹಧನ ಮೊತ್ತವನ್ನು ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಉತ್ತರಿಸಿದರು ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀಮತಿ ಉಮಾಶ್ರೀ** ಅವರು ಪೌರಕಾರ್ಮಿಕರುಗಳ ವೇತನವನ್ನು ಎಸ್.ಎಫ್.ಸಿ. ಮುಕ್ತ ನಿಧಿಯಿಂದ ಕೂಡಲೇ ವೇತನ ಪಾವತಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಡಾ: ಧನಂಜಯ ಸರ್ಜಿ** ಅವರು ಧರಣಿ ನಿರತರಿಗೆ ಧರಣಿ ನಡೆಯುವ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಶ್ರೀ ವೈ.ಎಂ. ಸತೀಶ್** ಅವರು ರಾಯಚೂರು ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರದ ಹಾಲು ಒಕ್ಕೂಟದ ಆಡಳಿತ ಮಂಡಳಿ ಚುನಾವಣೆಯನ್ನು ತುರ್ತಾಗಿ ನಡೆಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

**4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ**

1. **ಶ್ರೀ ರಾಮೋಜಿಗೌಡ** ಅವರು ರಾಜ್ಯದ ಶಾಲಾ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೇಂದ್ರೀಯ ಪಠ್ಯಕ್ರಮ ಮಾದರಿಯಲ್ಲಿ ಗಣಿತ ಮತ್ತು ವಿಜ್ಞಾನವನ್ನು ಓಅಇಖಖ ಶಿಫಾರಸ್ಸಿನಂತೆ ಪರಿಷ್ಕರಿಸುವ ಬಗ್ಗೆ ದಿನಾಂಕ:13.12.2024ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಸಿ.ಟಿ. ರವಿ** ಅವರು ನ್ಯಾ. ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸಿ ಒಳ ಮೀಸಲು ಜಾರಿಗೆ ತರಲು ಕ್ರಮ ಕೈಗೊಳ್ಳುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಗಗಅಒಅ ಸರ್ವರ್‌ನಿಂದಾಗಿ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕವು ವಿಶ್ವವಿದ್ಯಾಲಯಕ್ಕೆ ಸಂದಾಯವಾಗದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಈಗಾಗಲೇ ಭರ್ತಿ ಮಾಡಿರುವ ಅರ್ಜಿ ಮತ್ತು ಶುಲ್ಕವನ್ನು ಪರಿಗಣಿಸುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಶಶೀಲ್ ಜಿ. ನಮೋಶಿ** ಅವರು 1995ರ ನಂತರ ಪ್ರಾರಂಭವಾಗಿರುವ ಅನುದಾನ ರಹಿತ ಶಾಲಾ ಕಾಲೇಜುಗಳನ್ನು

ಅನುದಾನಕ್ಕೆ ಒಳಪಡಿಸುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ಎಂ. ನಾಗರಾಜು** ಅವರು ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದಲ್ಲಿ ಪ್ರೌಢ ಶಾಲೆಯನ್ನು ಪ್ರಾರಂಭಿಸುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಐವನ್ ಡಿ'ಸೋಜಾ** ಅವರು ಕಂಬಳ ಕ್ರೀಡೆಗಳಿಗೆ 2024–25ನೇ ಸಾಲಿನಲ್ಲಿ ತಲಾ 5 ಲಕ್ಷ ರೂ. ಸಹಾಯಧನ ನೀಡುವ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡುವ ಬಗ್ಗೆ ದಿನಾಂಕ:16.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಡಿ.ಎಸ್. ಅರುಣ್** ಅವರು ಮಲೆನಾಡು ಗಿಡ್ಡ ತಳಿ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ, ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಬಗ್ಗೆ ದಿನಾಂಕ:17.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

8. **ಶ್ರೀ ಶರವಣ ಟಿ.ಎ.** ಅವರು ಬಿಬಿಎಂಪಿ ಸೇರಿದಂತೆ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಿಲಿಕ್ವಿಂಶ್ ಡೀಡ್ ಮೂಲಕ ನೋಂದಣಿ ಮಾಡಿಸಲು ಅನುಕೂಲ ಕಲ್ಪಿಸುವ ಬಗ್ಗೆ ದಿನಾಂಕ:17.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

9. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ದೋಷಕ್ಕೆ ಕಾರಣರಾದವರ ಮೇಲೆ ಕ್ರಮವಹಿಸುವ ಬಗ್ಗೆ ದಿನಾಂಕ:17.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

ಮಧ್ಯಾಹ್ನ 2.35 ಗಂಟೆಯಲ್ಲಿ ಸದನವನ್ನು ಮುಂದೂಡಿ ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸಿದರು.**

01. ಕರ್ನಾಟಕ ಧನವಿನಿಯೋಗ (ಸಂಖ್ಯೆ–5) ವಿಧೇಯಕ, 2024
02. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
03. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024
04. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024

**6. ನಿಲುವಳಿ ಸೂಚನೆ**

ಮಾನ್ಯ ವಿರೋಧ ಪಕ್ಷದ ನಾಯಕರು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಘಟಕಗಳ ನಿರ್ಮಾಣಕ್ಕೆ ಕರೆದಿರುವ ಟೆಂಡರ್ ಆದೇಶವನ್ನು ರದ್ದುಪಡಿಸಿ ಕಾಮಗಾರಿಗಳ ಅಂದಾಜು ದರಗಳನ್ನು ಮರುಪರಿಶೀಲಿಸಿ ಅವಶ್ಯವಿರುವ ಕಾಮಗಾರಿಗಳಿಗೆ ಮರುಟೆಂಡರ್ ಆಹ್ವಾನಿಸುವ ಬಗ್ಗೆ ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರಿದರು.

ಆಡಳಿತಾತ್ಮಕ ವಿಷಯವಾಗಿರುವುದರಿಂದ ಸೂಚನೆಯನ್ನು ತಿರಸ್ಕರಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.35 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**7. ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

01. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"**ಕರ್ನಾಟಕ ಧನವಿನಿಯೋಗ (ಸಂಖ್ಯೆ–5) ವಿಧೇಯಕ**"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**ವಿಧೇಯಕವನ್ನು ಹಿಂಪಡೆಯುವುದು**

02. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ**"**ವನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಹಿಂಪಡೆಯಲಾಯಿತು.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

03. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ**"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

3. ಶ್ರೀ ಶರವಣ ಟಿ.ಎ.
4. ಶ್ರೀ ಕೆ.ಎಸ್. ನವೀನ್

ಮಧ್ಯಾಹ್ನ 4.10 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

5. ಶ್ರೀ ಸಿ.ಟಿ. ರವಿ
6. ಶ್ರೀ ಶಶೀಲ್ ಜಿ. ನಮೋಶಿ
7. ಶ್ರೀ ಎಸ್.ವ್ಹಿ. ಸಂಕನೂರ
8. ಡಾ: ತಳವಾರ್ ಸಾಬಣ್ಣ
9. ಶ್ರೀ ಐವನ್ ಡಿ'ಸೋಜಾ
10. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
11. ಶ್ರೀ ಎನ್. ರವಿಕುಮಾರ್
12. ಶ್ರೀಮತಿ ಬಲ್ಕೀಸ್ ಬಾನು
13. ಶ್ರೀ ಕೇಶವ ಪ್ರಸಾದ್ ಎಸ್
14. ಶ್ರೀ ಪುಟ್ಟಣ್ಣ
15. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
16. ಶ್ರೀ ಚಿದಾನಂದ್ ಎಂ. ಗೌಡ
17. ಶ್ರೀ ಗೋವಿಂದರಾಜು
18. ಶ್ರೀ ಎಂ. ನಾಗರಾಜು
19. ಶ್ರೀ ಡಿ.ಎಸ್. ಅರುಣ್

ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಸ್ಪಷ್ಟೀಕರಣ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

20. ಶ್ರೀ ಕೆ.ಎ. ತಿಪ್ಪೇಸ್ವಾಮಿ

21. ಶ್ರೀ ಪಿ.ಹೆಚ್. ಪೂಜಾರ್

ಮಾನ್ಯ ವಿರೋಧ ಪಕ್ಷದ ನಾಯಕರು ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿ ಮತಕ್ಕೆ ಹಾಕಬೇಕೆಂದು ಕೋರಿದರು.

ವಿಧೇಯಕವನ್ನು ಅಂಗೀಕಾರಕ್ಕಾಗಿ ಮತಕ್ಕೆ ಹಾಕಲಾಯಿತು.

ವಿಧೇಯಕದ ಪರವಾಗಿರುವವರು – 26

ವಿಧೇಯಕದ ವಿರೋಧವಾಗಿರುವವರು – 25

ವಿಧೇಯಕವನ್ನು ಅಂಗೀಕರಿಸಲಾಯಿತು.

04. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ವೈ.ಎಂ. ಸತೀಶ್
2. ಶ್ರೀ ಪಿ.ಹೆಚ್. ಪೂಜಾರ್
3. ಶ್ರೀ ಕೆ.ಎಸ್. ನವೀನ್
4. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
5. ಶ್ರೀ ಸಿ.ಟಿ. ರವಿ
6. ಶ್ರೀ ಎನ್. ರವಿಕುಮಾರ್

ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**8. ಚುನಾವಣಾ ಪ್ರಸ್ತಾವ**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ವಿಧಾನ ಪರಿಷತ್ತಿನ ಶಾಸಕರನ್ನು ಚುನಾಯಿಸುವ ಬದಲು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಸಭಾಪತಿಯವರಿಗೆ ನೀಡುವ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

05. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉಪ ಮುಖ್ಯಮಂತ್ರಿಯವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಶರವಣ ಟಿ.ಎ.
2. ಶ್ರೀ ಕೇಶವ ಪ್ರಸಾದ್ ಎಸ್.

ಮಾನ್ಯ ಉಪ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

06. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ"ವನ್ನು ಪರ್ಯಾಲೋಚಿಸಿ

ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೆ.ಎ. ತಿಪ್ಪೇಸ್ವಾಮಿ
2. ಶ್ರೀ ಕೇಶವ ಪ್ರಸಾದ್ ಎಸ್.
3. ಶ್ರೀ ಕೆ.ಎಸ್. ನವೀನ್
4. ಶ್ರೀ ಚಿದಾನಂದ್ ಎಂ. ಗೌಡ
5. ಶ್ರೀಮತಿ ಹೇಮಲತಾ ನಾಯಕ್
6. ಶ್ರೀ ಸಿ.ಟಿ. ರವಿ

ಮಾನ್ಯ ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

07. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾರ್ಮಿಕ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೆ.ಎ. ತಿಪ್ಪೇಸ್ವಾಮಿ
2. ಶ್ರೀ ಶರವಣ ಟಿ.ಎ.
3. ಶ್ರೀ ಕೇಶವ ಪ್ರಸಾದ್ ಎಸ್.
4. ಶ್ರೀ ಐವನ್ ಡಿ'ಸೋಜಾ

ಮಾನ್ಯ ಕಾರ್ಮಿಕ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

08. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಪಿ.ಹೆಚ್. ಪೂಜಾರ್
2. ಶ್ರೀ ಕೇಶವ ಪ್ರಸಾದ್ ಎಸ್.
3. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
4. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

09. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಐವನ್ ಡಿ'ಸೋಜಾ
2. ಶ್ರೀ ಕೆ.ಎಸ್. ನವೀನ್
3. ಶ್ರೀ ಎನ್. ರವಿಕುಮಾರ್
4. ಶ್ರೀ ಎಂ. ನಾಗರಾಜು
5. ಶ್ರೀ ಬಿ.ಕೆ. ಹರಿಪ್ರಸಾದ್
6. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
7. ಶ್ರೀಮತಿ ಭಾರತಿ ಶೆಟ್ಟಿ

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**ಪ್ರಕಟಣೆ**

**ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:18.12.2024**ರಂದು "2024ನೇ ಸಾಲಿನ **ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ"ವನ್ನು** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

10. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಬಸವನಬಾಗೇವಾಡಿ ಅಭಿವೃದ್ಧಿ

ಪ್ರಾಧಿಕಾರ ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೆ.ಎ. ತಿಪ್ಪೇಸ್ವಾಮಿ
2. ಶ್ರೀ ಪಿ.ಹೆಚ್. ಪೂಜಾರ್
3. ಶ್ರೀ ಕೇಶವ ಪ್ರಸಾದ್ ಎಸ್
4. ಶ್ರೀಮತಿ ಭಾರತಿ ಶೆಟ್ಟಿ

ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

11. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**09. ಗಮನ ಸೆಳೆಯುವ ಸೂಚನೆಗಳು**

**1. ಶ್ರೀ ಬಸನಗೌಡ ಬಾದರ್ಲಿ** ಅವರು ಸಿಂಧನೂರು ತಾಲ್ಲೂಕನ್ನು ಜಿಲ್ಲಾ ಕೇಂದ್ರ ಸ್ಥಾನವನ್ನಾಗಿ ಮೇಲ್ದರ್ಜೆಗೇರಿಸಲು ಸಮಿತಿ ರಚಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

**2. ಶ್ರೀ ಐವನ್ ಡಿ'ಸೋಜಾ** ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾರ್ವಜನಿಕರಿಗೆ ವಿವಿಧ ಪಿಂಚಣಿ ಯೋಜನೆಗಾಗಿ ನಿಗದಿಪಡಿಸಿದ

ಮಾನದಂಡಗಳ ವ್ಯವಸ್ಥೆಯಿಂದ ಲಕ್ಷಾಂತರ ಪಿಂಚಣಿ ಅರ್ಹರಿರುವ ಕುಟುಂಬಗಳಿಗೆ ಪಿಂಚಣಿ ಪಡೆಯಲು ಅಸಾಧ್ಯವಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

**10. ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆ**

ರಾತ್ರಿ 9.25 ಗಂಟೆಯಲ್ಲಿ ಶ್ರೀ ಮಂಜುನಾಥ್ ಭಂಡಾರಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಕ್ಕಳಲ್ಲಿ ಪೌಷ್ಠಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು ವಿಶೇಷ ಚರ್ಚೆ.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಐವನ್ ಡಿ'ಸೋಜಾ
2. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

ರಾತ್ರಿ 10.05 ಗಂಟೆಯಲ್ಲಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಸದನವನ್ನು ರಾತ್ರಿ 10.10 ಗಂಟೆಯಲ್ಲಿ ಮುಂದೂಡಿ ದಿನಾಂಕ:19.12.2024ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# **ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಗುರುವಾರ, ದಿನಾಂಕ:19.12.2024

(08)

ಸದನವು ಬೆಳಗ್ಗೆ: 10.20 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## **"ಗದ್ದಲ"**

ಸಂಸತ್ತಿನಲ್ಲಿ ಡಾ: ಅಂಬೇಡ್ಕರ್‌ರವರ ಕುರಿತು ಅಪಮಾನವಾಗುವಂತಹ ಹೇಳಿಕೆಗಳನ್ನು ಕೇಂದ್ರ ಸಚಿವರು ನೀಡಿರುವ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ನೀಡಬೇಕೆಂದು ಆಡಳಿತ ಪಕ್ಷದ ಶಾಸಕರುಗಳು ಕೋರಿದರು.

## **1. ಪ್ರಶ್ನೋತ್ತರ**

ದಿನಾಂಕ:19.12.2024ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 9ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 121(1227) | |
| 2. | 122(1147) | ವರ್ಗಾವಣೆ |
| 3. | 123(1285) | |
| 4. | 124(1188) | |
| 5. | 125(1171) | ಗೈರು ಹಾಜರಿ |
| 6. | 126(1195) | |
| 7. | 127(1264) | |

8. 128(1240)
9. 129(1220)
10. 130(1184)
11. 131(1175)
12. 132(1186)
13. 133(1148)
14. 134(1219)
15. 135(1275+1229)

**ದಿನಾಂಕ:12.12.2024ರ 4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

3. 47(449)
4. 49(436)
5. 51(551) ಗೈರು ಹಾಜರಿ
6. 52(407)
7. 57(515+495) ಗೈರು ಹಾಜರಿ

**ದಿನಾಂಕ:13.12.2024ರ 5ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

5. 73(661)
6. 75(594)

**ದಿನಾಂಕ:17.12.2024ರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 102(962) ಗೈರು ಹಾಜರಿ

ದಿನಾಂಕ:19.12.2024ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 9ನೇ ಪಟ್ಟಿಯ ಒಟ್ಟು 123 ಪ್ರಶ್ನೆಗಳ ಪೈಕಿ 78 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**2. ಶೂನ್ಯವೇಳೆ ಪ್ರಸ್ತಾವಗಳು**

**1.** **ಶ್ರೀಮತಿ ಬಲ್ಕೀಸ್ ಬಾನು** ಅವರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲದ ಪುನರ್ಧನ ಮಿತಿ ಗಣನೀಯವಾಗಿ ಕಡಿಮೆಯಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಹಕಾರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**2.** **ಶ್ರೀ ಎಂ. ನಾಗರಾಜು** ಅವರು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಸಾವಿರ ಹಾಸಿಗೆಗಳ ಬಹುಮಹಡಿ ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಧ್ಯಾಹ್ನ 12.05 ಗಂಟೆಯಲ್ಲಿ ಶ್ರೀಮತಿ ಭಾರತಿ ಶೆಟ್ಟಿ ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**3.** **ಡಾ: ತಳವಾರ್ ಸಾಬಣ್ಣ** ಅವರು ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಕ ಮಾಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಡಾ: ಚಿದಾನಂದ ಎಂ. ಗೌಡ** ಅವರು ರಾಜ್ಯ ಸಾರಿಗೆ ಸಂಸ್ಥೆಯ ನೌಕರರು ಡಿಸೆಂಬರ್ 31ರಿಂದ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಮಂಜುನಾಥ್ ಭಂಡಾರಿ** ಅವರು ಆಹಾರ ನಿಗಮದ ಗೋದಾಮಿನ ನಿರ್ವಹಣೆಗೆ ಮಾರ್ಗಸೂಚಿ ರೂಪಿಸಿ ನ್ಯಾಯಬೆಲೆ ಅಂಗಡಿಗಳನ್ನು ನಿಯಮಿತ ತಪಾಸಣೆ ಮಾಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ರಾಜ್ಯದಲ್ಲಿನ ಬಾಣಂತಿಯರಿಗೆ ತಾಯಿ ಕಾರ್ಡ್ ಸೌಲಭ್ಯವನ್ನು ತುರ್ತಾಗಿ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

7. **ಶ್ರೀ ಬಿ.ಕೆ. ಹರಿಪ್ರಸಾದ್, ಶ್ರೀ ಡಿ.ಎಸ್. ಅರುಣ್ ಹಾಗೂ ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ರೈತರ ಬಗರ್ ಹುಕುಂ ಅರ್ಜಿಗಳ ವಿಲೇವಾರಿಗೆ ಅರಣ್ಯ ಹಕ್ಕುಗಳ ಕಾಯ್ದೆಯಡಿ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಸೂಕ್ತ ತಿದ್ದುಪಡಿ ತರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀಮತಿ ಹೇಮಲತಾ ನಾಯಕ್** ಅವರು ಮುರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಜಿಲ್ಲಾಧಿಕಾರಿ ಹುದ್ದೆಗೆ ನೇಮಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಶರವಣ ಟಿ.ಎ.** ಅವರು ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಕಾಲಮಿತಿಯಲ್ಲಿ ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ರಾಮೋಜಿಗೌಡ** ಅವರು ಮುಖ್ಯ ಶಿಕ್ಷಕ ಹುದ್ದೆಗೆ ಹಾಗೂ ಹೈಸ್ಕೂಲ್ ಬಡ್ತಿಗೆ ಈ ಮುಂಚಿನ ನಿಯಮಾವಳಿಯಂತೆ ಅಖಂಡ ಸೇವಾ ಹಿರಿತನವನ್ನು ಪರಿಗಣಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಶಶೀಲ್ ಜಿ. ನಮೋಶಿ** ಅವರು ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಅಳವಡಿಸಿರುವ ಅನುಭವ ಮಂಟಪ ತೈಲವರ್ಣ ಕಲಾಕೃತಿಯನ್ನು ತೆಗೆದು ಮೂಲ ಕಲಾವಿದರ ಕಲಾಕೃತಿ ಅಳವಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

### 3. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಎಂ. ನಾಗರಾಜು** ಅವರು ಶಾಸಕರ ನಿಧಿ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲದ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್

ರಚಿಸುವ ಬಗ್ಗೆ ದಿನಾಂಕ:09.12.2024ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಡಾ:ತಳವಾರ ಸಾಬಣ್ಣ** ಅವರು ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮಕೈಗೊಳ್ಳುವ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ಬಗ್ಗೆ ದಿನಾಂಕ:09.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಡಾ: ಧನಂಜಯ ಸರ್ಜಿ** ಅವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿ ನಂತರ ಶುಲ್ಕ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿರುವ ಬಗ್ಗೆ ದಿನಾಂಕ:13.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಕೃಷ್ಣ ಭಾಗ್ಯ ಜಲನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಿಂದ ಆಲಮಟ್ಟಿಗೆ ಸ್ಥಳಾಂತರಿಸದೆ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿರುವ ಬಗ್ಗೆ ದಿನಾಂಕ:13.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀಮತಿ ಉಮಾಶ್ರೀ** ಅವರು ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಕೆಸಿಎಸ್ಆರ್ ನಿಯಮಗಳ ರೀತ್ಯಾ ನೇಮಕಾತಿ ಪ್ರಕ್ರಿಯೆ ರೀತ್ಯಾ ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ ದಿನಾಂಕ:13.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

8. **ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)** ಅವರು ಕೊಡಗು ಜಿಲ್ಲೆಯ ವಿವಿಧ ಪಂಚಾಯ್ತಿ ವ್ಯಾಪ್ತಿಯ ಜಾಗಗಳನ್ನು ಮೀಸಲು ಅರಣ್ಯ ಪ್ರದೇಶವೆಂದು ಹೊರಡಿಸಿರುವ ಆದೇಶಗಳನ್ನು ಹಿಂಪಡೆಯುವ ಬಗ್ಗೆ ದಿನಾಂಕ:17.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

9. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಜನರು ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಬಗ್ಗೆ ದಿನಾಂಕ:17.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

10. **ಶ್ರೀ ಗೋವಿಂದರಾಜು** ಅವರು ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಬಗ್ಗೆ ದಿನಾಂಕ:18.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

11. **ಶ್ರೀ ವೈ.ಎಂ. ಸತೀಶ್** ಅವರು ರಾಯಚೂರು ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರದ ಹಾಲು ಒಕ್ಕೂಟದ ಆಡಳಿತ ಮಂಡಳಿ ಚುನಾವಣೆಯನ್ನು ತುರ್ತಾಗಿ ನಡೆಸುವ ಬಗ್ಗೆ ದಿನಾಂಕ:18.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

12. **ಶ್ರೀ ಸಿ.ಎನ್. ಮಂಜೇಗೌಡ** ಅವರು **"ಕ್ಷೀರಧಾರೆ** ಯೋಜನೆ"ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹಧನ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ದಿನಾಂಕ:18.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

13. **ಶ್ರೀ ಬಿ.ಜಿ. ಪಾಟೀಲ್** ಅವರು ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ದಿನಾಂಕ:18.12.2024 ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

### 4. ಸಭೆಯ ಮುಂದಿಡಲಾಗುವ ಕಾಗದ ಪತ್ರ

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **"2024ನೇ ಸಾಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ"**ವನ್ನು ಸಭೆಯ ಮುಂದೆ ಮಂಡಿಸಿದರು.

### "ಗದ್ದಲ"

### 5. ಶಾಸನ ರಚನೆ

ಮಧ್ಯಾಹ್ನ 12.35 ಗಂಟೆಯಲ್ಲಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"**ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ಸೂಚಿಸಿ ವಿಧೇಯಕದ ವಿವರಣೆ ನೀಡಿದರು.

ಮಧ್ಯಾಹ್ನ 12.40 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 12.45 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಾನ್ಯ ಸಚಿವರು ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024ನ್ನು ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**"ಗದ್ದಲ"**

ಕೇಂದ್ರ ಸಚಿವರ ಕುರಿತು ವಿಧಾನ ಪರಿಷತ್ತಿನಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲವೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

ಮಧ್ಯಾಹ್ನ 12.52 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಸಂಜೆ 5.25 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**6. ಸಭಾಪತಿಯವರ ತೀರ್ಪು**

ಸದನವನ್ನು ಮಧ್ಯಾಹ್ನ 12.52 ಗಂಟೆಗೆ ಮುಂದೂಡಿದ ತರುವಾಯ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಪ್ರತಿಭಟನೆಯನ್ನು ಮುಂದುವರೆಸುತ್ತಾ ಇದ್ದು, ತದನಂತರ ಒಂದು ಗಂಟೆ ಸುಮಾರಿಗೆ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಉದ್ದೇಶಿಸಿ ಅಸಹ್ಯ ರೀತಿಯೊಳಗೆ ನೀನು ಪ್ರಾಸ್ಟಿಟ್ಯೂಟ್ ಎಂದು ಅವಮಾನಕಾರವಾಗಿ ಹೇಳುತ್ತಾ ಅಸಹ್ಯವಾಗಿ ಕೈ ಮಾಡುತ್ತಾ

ಅವಮಾನಿಸಿರುವುದಲ್ಲದೆ ಮಹಿಳೆಯಾದ ನನ್ನ ಮಾನವನ್ನು ಕಳೆಯುವ ಕೃತ್ಯ ಮಾಡಿದ್ದಾರೆ ಎಂದು ಆರೋಪಿಸಿ ಲಿಖಿತ ದೂರನ್ನು ನನಗೆ ಸಲ್ಲಿಸಿರುತ್ತಾರೆ.

ಎಂ.ಎನ್.ಕೌಲ್ ಮತ್ತು ಎಸ್.ಎಲ್. ಶಕ್ದರ್ ಅವರ ಸಂಸದೀಯ ಪದ್ಧತಿ ಮತ್ತು ಪ್ರಕ್ರಿಯೆಗಳ ಅನ್ವಯ ಈ ಕೆಳಕಂಡಂತೆ ಉಲ್ಲೇಖಿಸಿದೆ.

ಸಂಸದೀಯ ಬದುಕಿನ ಅತ್ಯುನ್ನತ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವಂತದಾಗಿದ್ದು, ಸದನದ ಘನತೆಗೆ ಕುಂದುಂಟು ಮಾಡುವಂತಾಗಿರಬಾರದು. ಸದಸ್ಯರ ದುರ್ನಡತೆಗಾಗಿ ಅವರನ್ನು ಶಿಕ್ಷಿಸುವ ಅಧಿಕಾರ ಸದನಕ್ಕಿದೆ, ತನ್ನ ಸದಸ್ಯರುಗಳ ನಡತೆಗಾಗಿ ಸದನದ ಒಳಗೆ ಅಥವಾ ಹೊರಗೆ ಆಗಿರಲಿ ಅವರನ್ನು ಕುರಿತು ಸೂಕ್ಷ್ಮವಾಗಿ ಪರಿಶೀಲನೆ ಮಾಡಲು ತನಗಿರುವ ಅಧಿಕಾರ ವ್ಯಾಪ್ತಿಯನ್ನು ಸದನವು ಚಲಾಯಿಸುತ್ತದೆ.

ಒಬ್ಬ ಸದಸ್ಯನು ಅನುಚಿತವಾದ ರೀತಿಯಲ್ಲಿ ವರ್ತಿಸಿದ್ದಾರೆಯೇ ಅಥವಾ ಸಂಸತ್ತು ಸದಸ್ಯರಿಗೆ ತಕ್ಕದ್ದಲ್ಲದ ರೀತಿಯಲ್ಲಿ ವರ್ತಿಸಿದ್ದಾರೆಯೇ ಎಂಬುದನ್ನು ನಿರ್ಧರಿಸುವುದು ಪ್ರತಿಯೊಂದು ಪ್ರಕರಣದಲ್ಲಿ ಸದನದ ಅಧಿಕಾರದ ವ್ಯಾಪ್ತಿಯೊಳಗೆ ಬರುವಂಥದ್ದಾಗಿದೆ.

ಒಬ್ಬ ಸದಸ್ಯನು ಅವನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಂದರೆ ಸದನದಲ್ಲಿರುವಾಗ ಅಥವಾ ಸದನದಿಂದ ಹೊರಗೆ ಹೋಗುತ್ತಿರುವಾಗ ಸದನದ ಆವರಣದೊಳಗೆ ಸದಸ್ಯರ ವಿರುದ್ಧ ಅಪಮಾನಕರ ಅಥವಾ ಬೈಗುಳ ಭಾಷೆಯನ್ನು ಬಳಸುವುದು ಹೀಗೆಯೇ ಒಬ್ಬ ಸದಸ್ಯನನ್ನು ಸಂಸತ್ತಿನಲ್ಲಿನ ಅವನ ನಡವಳಿಕೆಗಾಗಿ ಅಪಮಾನ ಮಾಡುವುದು ವಿಶೇಷಾಧಿಕಾರದ ಉಲ್ಲಂಘನೆ ವ್ಯಾಪ್ತಿಗೆ ಒಳಪಡುತ್ತದೆ.

ಮೇಲ್ಕಂಡ ದೂರಿನಲ್ಲಿರುವ ಅಂಶಗಳ ಮೇರೆಗೆ ಸದನದ ವ್ಯಾಪ್ತಿಗೆ ಒಳಪಡುವ ವಿದ್ಯುನ್ಮಾನಗಳ ಆಧಾರಿತ ಸಾಕ್ಷಿಗಳನ್ನು ಪರಿಶೀಲಿಸಿಕೊಂಡಿರುತ್ತೇನೆ. ಈ ಘಟನೆಗೆ ಸಾಕ್ಷಿಯಾಗಿ ಶಾಸಕರಾದ ಶ್ರೀಮತಿ ಉಮಾಶ್ರೀ, ಶ್ರೀಮತಿ ಬಲ್ಕೀಸ್ ಬಾನು, ಡಾ: ಯತೀಂದ್ರ ಎಸ್. ಹಾಗೂ ಶ್ರೀ ಎಂ. ನಾಗರಾಜು ಅವರುಗಳು ಮೌಖಿಕವಾಗಿ ಸಾಕ್ಷಿಯನ್ನು ನೀಡಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರಿಗೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರು ನೀಡಿರುವ ಲಿಖಿತ ದೂರಿನಲ್ಲಿರುವ ಅಂಶಗಳನ್ನು ಓದಿ ತಿಳಿಸಲಾಯಿತು. ತದನಂತರ ಅವರು ಈ ಕೆಳಕಂಡ ಹೇಳಿಕೆಯನ್ನು ನೀಡಿರುತ್ತಾರೆ.

ಸದನದಲ್ಲಿ ಡಾ: ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಅವರನ್ನು ಸೋಲಿಸಿದ್ದು, ಕಾಂಗ್ರೆಸ್ ಎಂಬ Play cardನ್ನು ಕೈಯಲ್ಲಿ ಹಿಡಿದು ಅವರು ಬದುಕಿದ್ದಾಗ ಸತ್ತಾಗ ಅಪಮಾನ ಮಾಡಿದ್ದು, ಕಾಂಗ್ರೆಸ್ ಪಕ್ಷ ನೀವು Frustrate ಆಗಿದ್ದೀರಿ ಹತಾಶೆ ಆಗಿದ್ದೀರಿ ಅದಕ್ಕೆ ಸುಳ್ಳು ಆರೋಪ ಮಾಡುತ್ತಿದ್ದೀರಿ ಎಂಬ ಮಾತನ್ನು ಹೇಳಿದ್ದೇನೆಯ ಹೊರತು ಆ ದೂರಿನಲ್ಲಿರುವ ಪದಗಳನ್ನು ಬಳಸಿಲ್ಲ ಎಂಬುದು ನನ್ನ ಸ್ಪಷ್ಟ ಹೇಳಿಕೆ.

ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಇವರಿಗೆ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ನೀಡಿದ ಹೇಳಿಕೆಯನ್ನು ಓದಿ ತಿಳಿಸಲಾಯಿತು. ಅವರ ಹೇಳಿಕೆಯನ್ನು ಆಲಿಸಿದ ಮಾನ್ಯ ಸಚಿವರು ನಾನು ನನ್ನ ದೂರಿನಲ್ಲಿ ಹೇಳಿರುವ ವಿಷಯ/ಆರೋಪಗಳಿಗೆ ನಾನು ಬದ್ದಳಾಗಿದ್ದೇನೆ ಎಂದು ತಿಳಿಸಿರುತ್ತಾರೆ.

ಸಾಂವಿಧಾನಿಕವಾಗಿ ಪವಿತ್ರವಾದ ಈ ಸಭಾಂಗಣದಲ್ಲಿ ಎಂದೂ ಮಹಿಳೆಯರನ್ನು ಗೌರವಿಸಲಾಗಿದೆಯೇ ಹೊರತು ಇಂತಹ ಅನುಚಿತ ಪದಗಳು ಹಾಗೂ ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಹ ಅವಹೇಳನಕಾರಿ ಪದಗಳನ್ನು ಯಾವ ಸಹ ಸದಸ್ಯರುಗಳು ಬಳಸಿರುವುದನ್ನು ನಾನು ನನ್ನ ಅಪಾರ ಹಾಗೂ ಸುದೀರ್ಘವಾದ ಅವಧಿಯಲ್ಲಿ ಎಂದೂ ಕಂಡಿರುವುದಿಲ್ಲ ಹಾಗೂ ಕೇಳಿರುವುದಿಲ್ಲ.

ಈ ಸದನದ ಹಿರಿಯ ಸದಸ್ಯನಾಗಿಯೂ ಹಾಗೂ ಸಭಾಪತಿಯಾಗಿಯೂ ನಾನು ಒಬ್ಬ ಮಹಿಳಾ ಸಚಿವರನ್ನು ಕುರಿತು ಶ್ರೀ ಸಿ.ಟಿ. ರವಿ ಅವರು ಹೇಳಿದ್ದಾರೆ ಎನ್ನಲಾದ ಪದಗಳು ನನ್ನ ದೃಷ್ಠಿಯಲ್ಲಿ ಗೌರವ ತರುವಂಥದಲ್ಲ.

ಯಾವುದೇ ಮಹಿಳೆಯು ತನ್ನ ಕುರಿತಾಗಿ ವಿನಾಕಾರಣ ಸಾರ್ವಜನಿಕವಾಗಿ ಅಗೌರವಿಸಿಕೊಳ್ಳುವಂತಹ ಮಾತುಗಳನ್ನು ಆಡಿದ್ದಾರೆ ಎಂದು ದೂರನ್ನು ನೀಡುವುದಿಲ್ಲ ಎಂದು ನನ್ನ ನಂಬಿಕೆ.

ಆಪಾದನೆಗೆ ಒಳಗಾದವರು ಆಪಾದನೆ ಮಾಡಿರುವವರು ಈ ವಿಷಯದ ಸತ್ಯಾಸತ್ಯತೆ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಜವಾಬ್ದಾರಿ ಸ್ಥಾನದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿರುವ ನಾವುಗಳು ಇತರರಿಗೆ ಮಾದರಿಯಾಗಿರುವಂತೆ ನಡೆದುಕೊಳ್ಳಬೇಕೆಂಬುದು ನನ್ನ ಅಭಿಲಾಷೆ. ಇದನ್ನು ಎಲ್ಲಾ ಗೌರವಾನ್ವಿತ ಶಾಸಕರುಗಳು ತಿಳಿದುಕೊಳ್ಳಬೇಕೆಂಬುದು ನನ್ನ ಕಳಕಳಿಯ ಮನವಿಯನ್ನು ತಾವು ಅರ್ಥ ಮಾಡಿಕೊಳ್ಳುತ್ತೀರಿ ಎಂದು ಭಾವಿಸುತ್ತೇನೆ.

**ಸಾರಾಂಶ**

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನ 154ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:09.12.2024 ರಿಂದ 19.12.2024ರವರೆಗೆ ಒಟ್ಟು 08 ದಿನಗಳು ಅಂದರೆ, 51 ಗಂಟೆ 48 ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 14 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2024–25ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು), ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಗಳನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01 ಹಾಗೂ 02 ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 2023–24ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ 1 ಮತ್ತು 2), ಮಾರ್ಚ್–2022ಕ್ಕೆ ಕೊನೆಗೊಂಡ ವರ್ಷದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:5), ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ (2024ರ ವರದಿ ಸಂಖ್ಯೆ:6), ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್) (2024ರ ವರದಿ ಸಂಖ್ಯೆ:7), ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ (2024ರ ವರದಿ ಸಂಖ್ಯೆ:8), ಕರ್ನಾಟಕದಲ್ಲಿನ ರಾಜ್ಯ ಸಂರಕ್ಷಿತ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಸಂರಕ್ಷಣೆಯ ಮೇಲಿನ ವರದಿ (2024ರ ವರದಿ ಸಂಖ್ಯೆ:9), 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಕಾರ್ಯನಿರ್ವಹಣಾ ವರದಿ (2024ರ ವರದಿ ಸಂಖ್ಯೆ:10) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಯ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೆಯ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 137ನೇ ಮತ್ತು 138ನೇ ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 38ನೇ ವರದಿ, ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ 39, 40, 41 ಹಾಗೂ 42ನೇ, ವರದಿಗಳನ್ನು ಒಪ್ಪಿಸಲಾಯಿತು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಮಾನ್ಯ ಶಾಸಕರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.10.2024ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿಯನ್ನು ಪಡೆಯಲಾಯಿತು.

"ಬೆಳಗಾವಿಯಲ್ಲಿ 1924ರಲ್ಲಿ ನಡೆದ 39ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಂಭ್ರಮದಲ್ಲಿ ಆಚರಿಸಲು ಯೋಜಿಸಲಾಗಿದೆ. ಭಾರತದ ಸ್ವಾತಂತ್ರ ಹೋರಾಟದ ಇತಿಹಾಸದಲ್ಲಿಯೇ ವಿಶೇಷವಾದ ಅಧಿವೇಶನ ಎಂಬ ಹೆಗ್ಗಳಿಕೆಗೂ ಈ ಬೆಳಗಾವಿ ಅಧಿವೇಶನ ಪಾತ್ರವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಇದು. ಅಲ್ಲದೆ ನಮ್ಮ ರಾಜ್ಯದಲ್ಲಿ ನಡೆದ ಏಕೈಕ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಅಧಿವೇಶನ ಕೂಡ ಹೌದು. ಹಿಂದೂ–ಮುಸ್ಲಿಂ ಸೌಹಾರ್ದತೆಯನ್ನು ಸಾರಿ ಏಕತೆಯಿಂದ ಅಖಂಡ ಭಾರತದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹೆಚ್ಚಿಸಿದ, 'ಗಾಂಧಿ' ಎನ್ನುವ ಬಿಂಬ ಸಾವಿರ ಕಣ್ಣುಗಳಲ್ಲಿ ಸಾವಿರ ತೆರನಾಗಿ ರೂಪಗೊಳ್ಳಲು ಕಾರಣವಾದ ವೇದಿಕೆ ಇದಾಗಿತ್ತು" ಎಂಬ ಅಧಿಕೃತ ನಿರ್ಣಯವನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು 5 ಗಂಟೆ 43 ನಿಮಿಷಗಳ ಕಾಲ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನಲೆಯಲ್ಲಿ ಅವರ ಕುರಿತು 4 ಗಂಟೆ 25 ನಿಮಿಷ ಕಾಲ ಹಾಗೂ

ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರಿಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು 45 ನಿಮಿಷಗಳ ಕಾಲ ವಿಶೇಷ ಚರ್ಚೆಯಾಗಿರುತ್ತದೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹೇಳಿಕೆ ನೀಡಿದರು.

ನಿಯಮ 59 ರಡಿಯಲ್ಲಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ನಿಯಮ 68ಕ್ಕೆ, 02 ನಿಯಮ 72ಕ್ಕೆ ಪರಿವರ್ತನೆಗೊಂಡು ಸದನದಲ್ಲಿ ಉತ್ತರಿಸಲಾಗಿರುತ್ತದೆ ಹಾಗೂ 01 ನಿಯಮ 330ಕ್ಕೆ ಪರಿವರ್ತಿಸಲಾಗಿದೆ. 02 ತಿರಸ್ಕೃತಗೊಂಡಿರುತ್ತದೆ.

ನಿಯಮ 68ರಡಿಯಲ್ಲಿ 04 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 02 ಸೂಚನೆಗಳು ಅನುಮೋದನೆಗೊಂಡು 02 ತಿರಸ್ಕೃತಗೊಂಡಿರುತ್ತವೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1397 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 104 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 26 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1247 ಪ್ರಶ್ನೆಗಳ ಪೈಕಿ 886 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 142 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 07 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 65 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 99 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 01 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 45 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 73 ಸೂಚನೆಗಳ ಪೈಕಿ 09ಕ್ಕೆ ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 02 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 14 ವಿದೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ 02 ವಿಧೇಯಕಗಳನ್ನು ಹಿಂಪಡೆಯಲಾಯಿತು.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಬೆಳಗಾವಿ ಜಿಲ್ಲೆಯ ಜಿಲ್ಲಾಡಳಿತ ವರ್ಗಕ್ಕೆ ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸಂಜೆ 5.32 ಗಂಟೆಯಲ್ಲಿ ರಾಷ್ಟ್ರಗೀತೆಯನ್ನು ನುಡಿಸುವುದರ ಮೂಲಕ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.**

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

*****

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ.707/ಪಿ5